# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ಎಂ.ಎಸ್. ವಿಕಾಸ್

ದಾವಣಗೆರೆ
ಗುರುವಾರ, ಅಕ್ಟೋಬರ್ 17, 2024

ಸಂಪುಟ : 51 ಸಂಚಿಕೆ : 154 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com







# ದಾವಣಗೆರೆ ಬಂದ್‌ಗೆ ಮಿಶ್ರ ಪ್ರತಿಕ್ರಿಯೆ

## ಯುಬಿಡಿಟಿ ಕಾಲೇಜು ಉಳಿಸಿ ಅಭಿಯಾನಕ್ಕೆ ಸಂಘ-ಸಂಸ್ಥೆಗಳ ಬೆಂಬಲ, ಪ್ರತಿಭಟನೆ






ದಾವಣಗೆರೆ, ಅ. 16- ನಗರದ ಯುಬಿಡಿಟಿ ಇಂಜಿನಿಯರಿಂಗ್ ಕಾಲೇಜು ಉಳಿಸಬೇಕು. ಶೇ. 50 ರಷ್ಟು ಪೇಮೆಂಟ್ ಕೋಟಾ ಜಾರಿಗೊಳಿಸಿರುವುದನ್ನು ಹಿಂಪಡೆಯಬೇಕು. ಕಾಲೇಜಿಗೆ ಅನುದಾನ ನೀಡಬೇಕೆಂದು ಆಗ್ರಹಿಸಿ ಎಐಡಿಎಸ್‌ಓ ನೇತೃತ್ವದಲ್ಲಿ ವಿವಿಧ ಪ್ರಗತಿಪರ ಮತ್ತು ಕನ್ನಡಪರ ಸಂಘಟನೆಗಳ ಬೆಂಬಲದೊಂದಿಗೆ ನಡೆದ ದಾವಣಗೆರೆ ಬಂದ್‌ಗೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ.

ರಾಜ್ಯದ ಪ್ರಥಮ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಎಂಬ ಹೆಗ್ಗಳಿಕೆಗೆ ಪಾತ್ರವಾದ ಯುಬಿಡಿಟಿ ಕಾಲೇಜನ್ನು ಶೇ. 50 ರಷ್ಟು ಪೇಮೆಂಟ್ ಕೋಟಾ ಮೂಲಕ ಖಾಸಗೀರಣ ಮಾಡುತ್ತಿರುವುದನ್ನು ಪ್ರತಿಭಟನಾ ಕಾರರು ಖಂಡಿಸಿದರು.

ಬೆಳಿಗ್ಗೆಯಿಂದಲೇ ಬೀದಿಗಿಳಿದ ವಿದ್ಯಾರ್ಥಿ ಯುವಜನರು, ರೈತ ಮುಖಂಡರು, ಕಾರ್ಮಿಕ ಮುಖಂಡರು, ದಲಿತ ಹಾಗೂ ಕನ್ನಡಪರ ಸಂಘಟನೆಗಳ ಕಾರ್ಯಕರ್ತರು ನಗರದಲ್ಲಿ ಪ್ರತಿಭಟನೆ ನಡೆಸಿ, ಯುಬಿಡಿಟಿ ಕಾಲೇಜಿನಲ್ಲಿ ಜಾರಿಗೆ ತಂದಿರುವ ಶೇ. 50 ರಷ್ಟು ಪೇಮೆಂಟ್ ಕೋಟಾ ಪದ್ಧತಿಯನ್ನು ರದ್ದುಗೊಳಿಸುವಂತೆ ಒತ್ತಾಯಿಸಿದರು.

### ಪ್ರತಿಭಟನಾಕಾರರ ಬಂಧನ-ಬಿಡುಗಡೆ

**ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಮುಂಭಾಗ ಪ್ರತಿಭಟನೆ ನಡೆಸುತ್ತಿದ್ದ ಪ್ರತಿಭಟನಾಕಾರರನ್ನು ಪೊಲೀಸರು ಬಂಧಿಸಿ, ಗಾಂಧಿ ವೃತ್ತದಲ್ಲಿ ಬಿಡುಗಡೆ ಮಾಡಿದ ನಂತರ ಪ್ರತಿಭಟನಾಕಾರರು ಮಹಾನಗರ ಪಾಲಿಕೆ ಎದುರಿಗಿರುವ ಭಗತ್‌ಸಿಂಗ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಪ್ರತಿಭಟನಾ ಮೆರವಣಿಗೆ ಆರಂಭಿಸಿದರು.**

ನಗರದ ಜಯದೇವ ವೃತ್ತ, ಅಶೋಕ ರಸ್ತೆ, ಗಾಂಧಿ ವೃತ್ತ, ಪಿ.ಬಿ. ರಸ್ತೆ, ಹದಡಿ ರಸ್ತೆ, ಕೆ.ಆರ್. ಮಾರ್ಕೆಟ್ ರಸ್ತೆ, ಕಾಯಿಪೇಟೆ, ಗಡಿಯಾರ ಕಂಬ, ಕಾಯಿಪೇಟೆಯಲ್ಲಿ ಮಧ್ಯಾಹ್ನದವರೆಗೆ ಕೆಲವು ಅಂಗಡಿ ಮುಂಗಟ್ಟುಗಳು ಮುಚ್ಚಲ್ಪಟ್ಟಿದ್ದವು. ಎವಿಕೆ ಕಾಲೇಜು ರಸ್ತೆ, ರಾಮ್ ಅಂಡ್ ಕೋ ರಸ್ತೆ, ಆಂಜನೇಯ ಬಡಾವಣೆ, ವಿದ್ಯಾನಗರ, ಚರ್ಚ್ ರಸ್ತೆ, ಶಾಮನೂರು ರಸ್ತೆಗಳ ಬದಿಯಲ್ಲಿನ ವ್ಯಾಪಾರ ವಹಿವಾಟು ಎಂದಿನಂತೆ ನಡೆಯಿತು.

ನಗರ ಸಂಚಾರ ವ್ಯವಸ್ಥೆ ಸಹಜವಾಗಿ ಇರುವುದು ಕಂಡಬಂದಿತು. ಖಾಸಗಿ ಮತ್ತು ಕೆಎಸ್‌ಆರ್‌ಟಿಸಿ ಬಸ್ ಸಂಚಾರ ಬೆಳಿಗ್ಗೆ ಕೆಲ ಹೊತ್ತು ಸ್ಥಗಿತಗೊಂಡು ನಂತರ ಎಂದಿನಂತೆ ಆರಂಭಗೊಂಡಿತು. ಆಟೋಗಳ ಸಂಚಾರ (4ನೇ ಪುಟಕ್ಕೆ)

# ಸಿಎಂಗೆ ಮತ್ತೊಂದು ಸಂಕಷ್ಟ

## ನಿಯಮ ಬಾಹಿರವಾಗಿ 6.26 ಎಕರೆ ಡಿ-ನೋಟಿಫಿಕೇಷನ್: ದೂರು



ಬೆಂಗಳೂರು, ಅ. 16- ಮುಖ್ಯಮಂತ್ರಿ ಸಿದ್ದ ರಾಮಯ್ಯ ಮತ್ತೊಂದು ಡಿ-ನೋಟಿಫಿಕೇಷನ್ ಸಂಕಷ್ಟಕ್ಕೆ ಸಿಲುಕಿದ್ದಾರೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ)ದಲ್ಲಿ ಕಾನೂನು ನಿಯಮಗಳನ್ನು ಗಾಳಿಗೆ ತೂರಿ ಮುಖ್ಯಮಂತ್ರಿ 6.26 ಎಕರೆ ಭೂಮಿಯನ್ನು ಡಿ-ನೋಟಿಫಿಕೇಷನ್ ಮಾಡಿ ಸಂಸ್ಥೆಗೆ 400 ಕೋಟಿ ರೂ. ನಷ್ಟ ಉಂಟು ಮಾಡಿದ್ದು, ಅವರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುವಂತೆ ರಾಜ್ಯಪಾಲ ತಾವರ್‌ಚಂದ್ ಗೆಹ್ಲೋಟ್ ಅವರಿಗೆ ಮನವಿ ಮಾಡಲಾಗಿದೆ.

ನಗರದ ಭೂಪಸಂದ್ರದ 6.26 ಎಕರೆ ವಿಸ್ತೀರ್ಣದ ಭೂಮಿ ಡಿ-ನೋಟಿಫೈ ಮಾಡಿದ ಪ್ರಕರಣದಲ್ಲಿ ನಿವೃತ್ತ ಐಎಎಸ್ ಅಧಿಕಾರಿಗಳಾದ ಮಹೇಂದ್ರ ಜೈನ್ ಮತ್ತು ಶ್ಯಾಮ್ ಭಟ್ ಸೇರಿದಂತೆ ಕೆಲವರ ವಿರುದ್ಧ ದೂರು ದಾಖಲಾಗಿದೆ.

ಬಿಜೆಪಿ ಹಿರಿಯ ನಾಯಕ ಹಾಗೂ ಭ್ರಷ್ಟಾಚಾರ ವಿರೋಧಿ ವೇದಿಕೆ ಅಧ್ಯಕ್ಷ ಎನ್.ಆರ್. ರಮೇಶ್ ಪ್ರಕರಣಕ್ಕೆ ಸಂಬಂಧಿಸಿದಂತೆ 1162 ಪುಟ ಗಳ ಸಂಪೂರ್ಣಗಳನ್ನು ದಾಖಲೆಗಳು ಒಳಗೊಂಡ ದೂರನ್ನು ರಾಜಭವನಕ್ಕೆ ಸಲ್ಲಿಸಿದ್ದಾರೆ.

ಇದೇ ಕಾಲಕ್ಕೆ ಜನಪ್ರತಿನಿಧಿಗಳ ನ್ಯಾಯಾಲಯದಲ್ಲೂ ಖಾಸಗಿ ದೂರು ಸಲ್ಲಿಸುವುದರ ಜೊತೆಗೆ ಲೋಕಾಯುಕ್ತ ಎಡಿಜಿಪಿ ಮಣೀಶ್ ಕಾರ್ಬಿಕರ್ ಹಾಗೂ ಐಜಿಪಿ ಸುಬ್ರಹ್ಮಣ್ಯೇಶ್ವರ ರಾವ್ ಅವರಿಗೆ ಪ್ರತ್ಯೇಕ ದೂರುಗಳನ್ನು ನೀಡಿದ್ದಾರೆ.

ಕಳೆದ ಮುಖ್ಯಮಂತ್ರಿ ಅಧಿಕಾರವಧಿಯಲ್ಲಿ ಸಿದ್ದರಾಮಯ್ಯ ಅಧಿಕಾರಿಗಳನ್ನು ಬಳಕೆ ಮಾಡಿಕೊಂಡು ಭ್ರಷ್ಟಾಚಾರ ನಡೆಸಿ ಬೃಹತ್ ಪ್ರಮಾಣದಲ್ಲಿ ನಷ್ಟ ಉಂಟು ಮಾಡಿದ್ದಾರೆ. ಆರ್‌ಎಂವಿ ಎರಡನೇ ಹಂತದ ಬಡಾವಣೆ ನಿರ್ಮಾಣಕ್ಕೆಂದು 1984ರಲ್ಲಿ ಬಿಡಿಎ ಭೂಪಸಂದ್ರ ಗ್ರಾಮದ ಪ್ರದೇಶವನ್ನು ಸ್ವಾಧೀನ (2ನೇ ಪುಟಕ್ಕೆ)

# ಮಳೆ ಹಾನಿ ನಿಭಾಯಿಸಲು ಸರ್ಕಾರ ಸಮರ್ಥ



ಬೆಂಗಳೂರು, ಅ. 16 - ರಾಜ್ಯದ ವಿವಿಧೆಡೆ ಸುರಿಯುತ್ತಿರುವ ಭಾರೀ ಮಳೆಯಿಂದ ಉಂಟಾಗುವ ಹಾನಿ ನಿಭಾಯಿಸಲು ಸರ್ಕಾರ ಸಮರ್ಥವಾಗಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಕೃತಿಗೆ ಕಡಿವಾಣ ಹಾಕಲು, ಚಂಡಮಾರುತ ತಡೆಯಲು ಸಾಧ್ಯವಿಲ್ಲ ಎಂಬ ಸತ್ಯ ಅರ್ಥ ಮಾಡಿಕೊಳ್ಳದ ವಿರೋಧ ಪಕ್ಷಗಳು, ಸರ್ಕಾರದ ವಿರುದ್ಧ ಟೀಕೆ ಮಾಡುವುದನ್ನು ನಿಲ್ಲಿಸಬೇಕು ಎಂದರು. ಪೊಲೀಸ್ ಇಲಾಖೆ, ಅಗ್ನಿಶಾಮಕ ದಳ ಹಾಗೂ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳ ಜೊತೆ ಸಭೆ ನಡೆಸಿ ಪರಿಸ್ಥಿತಿ ಅವಲೋಕನ ಮಾಡಲಾಗುವುದು.

ಎಷ್ಟೇ ಮಳೆ ಸುರಿದರೂ ನಿಭಾಯಿಸಲು ಸರ್ಕಾರ ಸಮರ್ಥವಾಗಿದೆ ಎಂದರು.



# ವಾಲ್ಮೀಕಿ ಜಯಂತಿ: ಅದ್ದೂರಿ ಬೈಕ್ ರ್‍ಯಾಲಿ

ದಾವಣಗೆರೆ, ಅ.16- ಮಹರ್ಷಿ ವಾಲ್ಮೀಕಿ ಜಯಂತ್ಯುತ್ಸವ ಪ್ರಯುಕ್ತ ಜನಜಾಗೃತಿಗಾಗಿ ಜಿಲ್ಲಾ ವಾಲ್ಮೀಕಿ ನಾಯಕ ಯುವ ಘಟಕದ ವತಿಯಿಂದ ಇಂದು ನಗರದಲ್ಲಿ ಬೈಕ್ ರ್‍ಯಾಲಿ ಜರುಗಿತು.

ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಶ್ರೀ ಪ್ರಸನ್ನಾನಂದಪುರಿ ಸ್ವಾಮೀಜಿ ಮತ್ತು ಸಮಾಜದ ಮುಖಂಡರು ವಾಲ್ಮೀಕಿ ಮಹರ್ಷಿ ಭಾವಚಿತ್ರಕ್ಕೆ ಪೂಜೆ ಮತ್ತು ಪುಷ್ಪಾರ್ಚನೆ ಸಲ್ಲಿಸಿ ಬೈಕ್ ರ್‍ಯಾಲಿಗೆ ವಿಧ್ಯುಕ್ತ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ (4ನೇ ಪುಟಕ್ಕೆ)

# ಗೋಧಿ ಕನಿಷ್ಠ ಬೆಂಬಲ ಬೆಲೆ 150 ರೂ. ಹೆಚ್ಚಳ

ನವದೆಹಲಿ, ಅ. 16 - ಕೇಂದ್ರ ಸರ್ಕಾರ ಗೋಧಿಯ ಕನಿಷ್ಠ ಬೆಂಬಲ ಬೆಲೆಯನ್ನು 150 ರೂ.ಗಳಿಗೆ ಹೆಚ್ಚಿಸಿ 2,425 ರೂ. ಗಳಿಗೆ ನಿಗದಿಪಡಿಸಿದೆ. 2025 - 26ರ ಹಂಗಾಮಿಗೆ ಈ ಬೆಲೆ ನಿಗದಿಪಡಿಸಲಾಗಿದೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಂಪುಟದ ಆರ್ಥಿಕ ವ್ಯವಹಾರಗಳ ಸಮಿತಿ ಸಭೆಯಲ್ಲಿ ಆರು ಹಿಂಗಾರು ಬೆಳೆಗಳ ಬೆಂಬಲ ಬೆಲೆ ಹೆಚ್ಚಿಸಲು ನಿರ್ಧರಿಸಲಾಗಿದೆ. 130 ರಿಂದ 300 ರೂ.ಗಳವರೆಗೆ ಬೆಲೆ ಹೆಚ್ಚಿಸಲಾಗಿದೆ.

# ಕೇಂದ್ರ ನೌಕರರ ತುಟ್ಟಿ ಭತ್ಯೆ ಶೇ.3ರಷ್ಟು ಹೆಚ್ಚಳ

ನವದೆಹಲಿ, ಅ. 16 - ಕೇಂದ್ರ ಸರ್ಕಾರಿ ನೌಕರರ ತುಟ್ಟಿ ಭತ್ಯೆಯನ್ನು ಶೇ.3ರಷ್ಟು ಹೆಚ್ಚಿಸಲಾಗಿದೆ. ಜುಲೈ 1 ರಿಂದ ಜಾರಿಗೆ ಬರುವಂತೆ ಹೆಚ್ಚಳ ಅನ್ವಯ ವಾಗಲಿದೆ. ಸರ್ಕಾರದ ಈ ಕ್ರಮ ಒಂದು ಕೋಟಿ ಉದ್ಯೋಗಿಗಳು ಹಾಗೂ ಪಿಂಚಣಿದಾರರಿಗೆ ನೆರವಾಗಲಿದೆ.

ಸರ್ಕಾರದ ಈ ನಿರ್ಧಾರದಿಂದ ಬೊಕ್ಕಸಕ್ಕೆ 9448 ಕೋಟಿ ರೂ.ಗಳ ಹೊರೆ ಯಾಗಲಿದೆ. ಮಾರ್ಚ್ ತಿಂಗಳಲ್ಲಿ ತುಟ್ಟಿ ಭತ್ಯೆಯನ್ನು ಶೇ.4ರಷ್ಟು ಹೆಚ್ಚಿಸಿತ್ತು.

# ರತ್ನಮ್ಮ ಸೋಗಿಗೆ ಮಹರ್ಷಿ ವಾಲ್ಮೀಕಿ ಪ್ರಶಸ್ತಿ

ಬೆಂಗಳೂರು, ಅ. 16 - 2024 ನೇ ಸಾಲಿಗೆ ಶ್ರೀ ಮಹರ್ಷಿ ವಾಲ್ಮೀಕಿ ಪ್ರಶಸ್ತಿಯನ್ನು ರಾಜ್ಯ ಸರ್ಕಾರ ಪ್ರಕಟಿಸಿದ್ದು, ಐವರು ಪುರಸ್ಕಾರಕ್ಕೆ ಪಾತ್ರರಾಗಿದ್ದರೆ. ರಂಗಭೂಮಿ ಕ್ಷೇತ್ರದ ಸಾಧನೆಗಾಗಿ ವಿಜಯನಗರ ಜಿಲ್ಲೆ, ಹರಪನ ಹಳ್ಳಿಯ ರತ್ನಮ್ಮ ಬಿ. ಸೋಗಿ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಬುಡಕಟ್ಟು ಸಂಸ್ಕೃತಿ ಸೇವೆಗಾಗಿ ಚಿತ್ರದುರ್ಗ ಜಿಲ್ಲೆಯ ಕಿಲಾರಿ ಜೋಗಯ್ಯ, ಸಮಾಜ ಸೇವೆಗಾಗಿ ಚಾಮರಾಜನಗರ ಜಿಲ್ಲೆಯ ಡಾ. ಎಸ್. ರತ್ನಮ್ಮ, ಸಾಮಾಜಿಕ ಕ್ಷೇತ್ರ ಕ್ಕಾಗಿ ಬೆಳಗಾವಿಯ ರಾಜಶೇಖರ ತಳವಾರ ಹಾಗೂ ಬೆಂಗಳೂರಿನ ಕೆ. ಎಸ್. ಮೃತ್ಯುಂಜಯ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.







# ಶಿಗ್ಗಾಂವಿ - ಸವಣೂರು ಉಪ ಚುನಾವಣೆ ಟಿಕೆಟ್ ಆಕಾಂಕ್ಷಿಗಳ ಪೈಪೋಟಿ ಆರಂಭ




ರಾಣೇಬೆನ್ನೂರು,ಅ.16- ಸಂಸದ ಬಸವರಾಜ ಬೊಮ್ಮಾಯಿ ರಾಜೀನಾಮೆಯಿಂದ ತೆರವಾಗಿರುವ ಶಿಗ್ಗಾಂವಿ-ಸವಣೂರ ಕ್ಷೇತ್ರದ ಉಪಚುನಾವಣೆ ಘೋಷಣೆಯಾಗುತ್ತಿದ್ದಂತೆ ಆಕಾಂಕ್ಷಿಗಳ ಪೈಪೋಟಿ ಚುರುಕುಗೊಂಡಿದೆ.

ಲೋಕಸಭೆ ಚುನಾವಣೆಯಲ್ಲಿ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಆನಂದ ಗಡ್ಡದದೇವರಮಠ ಅವರು, ಬಿಜೆಪಿಗಿಂತ 9 ಸಾವಿರದಷ್ಟು ಹೆಚ್ಚು ಮತ ಗಳಿಸಿದ್ದು, ಕಾಂಗ್ರೆಸ್ಸಿಗರಲ್ಲಿ ಹುಮ್ಮಸ್ಸು ಹೆಚ್ಚಾಗಿದೆ. ಹಾಗಾಗಿ ಬೊಮ್ಮಾಯಿ ರಾಜೀನಾಮೆ ಕೊಡುತ್ತಲೇ ಪ್ರಬಲ ಆಕಾಂಕ್ಷಿ ಮಾಜಿ ಶಾಸಕ ಅಜ್ಜಂಪೀರ್ ಖಾದ್ರಿ ತನ್ನೆಲ್ಲ ಬೆಟಾಲಿಯನ್ ಜೊತೆಗೆ ಕ್ಷೇತ್ರದಲ್ಲಿ ಎರಡೆರಡು ಬಾರಿ ಸಂಚರಿಸಿದ್ದಾರೆ. ಅಲ್ಲದೇ ಕಾಂಗ್ರೆಸ್‌ನ ಆಕಾಂಕ್ಷಿಗಳ ಪಟ್ಟಿಯೂ ಹೆಚ್ಚುತ್ತಿದೆ.

ಕ್ಷೇತ್ರವನ್ನು ಮೂರು ಬಾರಿ ಪ್ರತಿನಿಧಿಸಿದ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ತಮ್ಮ ಮಗ ಭರತ್ ಅವರಿಗೆ ಬಿಜೆಪಿ ಟಿಕೆಟ್ ಕೊಡಿಸಿ, ಕ್ಷೇತ್ರದ ಉತ್ತರಾಧಿಕಾರಿ ಮಾಡುವ ನಿಟ್ಟಿನಲ್ಲಿ ರಾಜಕೀಯದ ಎಲ್ಲ ತಂತ್ರಗಾರಿಕೆಗಳನ್ನು ಉಪಯೋಗಿಸಿಕೊಂಡು, ಆಕಾಂಕ್ಷಿಗಳ ಪಟ್ಟಿಯಲ್ಲಿ ಭರತ ಹೆಸರು ಮೊದಲಿಗೆ ತರುವುದರೊಂದಿಗೆ ಕ್ಷೇತ್ರದಾದ್ಯಂತ ಮಗನೊಂದಿಗೆ ಚುನಾವಣಾ ಪ್ರಚಾರ ಮಾಡಿದ್ದಾರೆಂದು ಹೇಳಲಾಗುತ್ತಿದೆ. ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಪಕ್ಷಗಳಲ್ಲಿ ಆಕಾಂಕ್ಷಿಗಳು ಹೆಚ್ಚಾಗಿದ್ದಾರೆ.

ಲೋಕಸಭೆಯ ಮತ ಗಳಿಕೆಯಿಂದಾಗಿ ಚುನಾವಣೆ ನಡೆಸಲು ಕಾಂಗ್ರೆಸ್ ಸಂಪೂರ್ಣ ಸನ್ನದ್ದವಾಗಿದೆ. ಗೆಲುವು ನಮ್ಮದೇ ಎನ್ನುವ ವಿಶ್ವಾಸದೊಂದಿಗೆ ಪಕ್ಷದ ಹಾವೇರಿ ಜಿಲ್ಲಾಧ್ಯಕ್ಷ ಸಂಜೀವಕುಮಾರ ನೀರಲಗಿ ಇದ್ದಾರೆ. ಬಸವರಾಜ ಬೊಮ್ಮಾಯಿ ಅವರು ಮಾಡಿರುವ ಕ್ಷೇತ್ರದ ಅಭಿವೃದ್ಧಿಯಿಂದಾಗಿ ನಮ್ಮ ಪಕ್ಷದ ಅಭ್ಯರ್ಥಿಗೆ ಜಯ ಸಿಗುವುದರಲ್ಲಿ ಅನುಮಾನವೇ ಇಲ್ಲ ಎನ್ನುವ ನಂಬುಗೆಯೊಂದಿಗೆ ಬಿಜೆಪಿ ಜಿಲ್ಲಾಧ್ಯಕ್ಷ ಅರುಣಕುಮಾರ ಪೂಜಾರ ಚುನಾವಣೆಗೆ ಸಜ್ಜಾಗಿದ್ದಾರೆ.

ಎರಡೂ ತಾಲ್ಲೂಕು ವ್ಯಾಪ್ತಿಯ ಈ ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 2,33,165 ಮತದಾರರಿದ್ದಾರೆ. ಅದರಲ್ಲಿ ಪುರುಷರು 1,19,373, ಮಹಿಳೆಯರು 1,13,785, ಅಂಗವಿಕಲರು 5,030, ಸೇವಾ ಮತದಾರರು 144 ಹಾಗೂ 6,536 ಮತದಾರರು 18 ರಿಂದ 19 ವರ್ಷದವರು. 85 ವರ್ಷ ಮೇಲ್ಪಟ್ಟವರು 2,828, ಇತರ ಮತದಾರರು 7 ಜನ ಇದ್ದಾರೆ.

# ಕುಡಿತ ದೇಹಕ್ಕೆ ಮಾತ್ರವಲ್ಲ ದೇಶಕ್ಕೂ ಸಹ ಶತ್ರು

## ಹರಪನಹಳ್ಳಿ : ಮದ್ಯವರ್ಜನ ಶಿಬಿರದಲ್ಲಿ ನೀಲಗುಂದದ ಶ್ರೀ ಚನ್ನಬಸವ ಶಿವಯೋಗಿ ಸ್ವಾಮೀಜಿ



ಹರಪನಹಳ್ಳಿ. ಅ.16- ಕುಡಿತ ದೇಹಕ್ಕೆ ಮಾತ್ರವಲ್ಲ ದೇಶಕ್ಕೂ ಶತ್ರುವಾಗಿ ಪರಿಣಮಿಸಿದೆ. ಹಾಗಾಗಿ ಶಿವಪೂಜೆ ಧರ್ಮ ಕಾರ್ಯಗಳಿಗಿಂತ ಮದ್ಯವರ್ಜನೇ ಶಿಬಿರಗಳು ಮಹತ್ವವಾಗಿವೆ ಎಂದು ನೀಲಗುಂದ ವಿರಕ್ತ ಮಠದ ಶ್ರೀ ಚನ್ನಬಸವ ಶಿವಯೋಗಿ ಸ್ವಾಮೀಜಿ ಹೇಳಿದರು.

ಪಟ್ಟಣದ ತರಳಬಾಳು ಕಲ್ಯಾಣ ಮಂಟಪದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ದಿ ಯೋಜನೆ ಬಿ.ಸಿ. ಟ್ರಸ್ಟ್, ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಟ್ರಸ್ಟ್ ಬೆಳ್ತಂಗಡಿ, ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಟ್ರಸ್ಟ್, ಪೊಲೀಸ್ ಇಲಾಖೆ, ಆರೋಗ್ಯ ಇಲಾಖೆ ಹಾಗೂ ಪುರಸಭೆ, ಗ್ರಾಮ ಪಂಚಾಯಿತಿಗಳು ಹಾಗೂ ಪ್ರಗತಿಬಂಧು ಸ್ವ-ಸಹಾಯ ಸಂಘಗಳ ಒಕ್ಕೂಟ. ನವಜೀವನ ಸಮಿತಿ ಮತ್ತು ಸ್ಥಳೀಯ ಸಂಘ ಸಂಸ್ಥೆಗಳು ಮತ್ತು ದಾನಿಗಳ ಸಹಕಾರದೊಂದಿಗೆ ನಿನ್ನೆ ಹಮ್ಮಿಕೊಳ್ಳಲಾಗಿದ್ದ 1872ನೇ ಮದ್ಯವರ್ಜನ ಶಿಬಿರವನ್ನು ಉದ್ಘಾಟಿಸಿ ಸ್ವಾಮೀಜಿ ಮಾತನಾಡಿದರು.

ಮದ್ಯವರ್ಜನೆ ಶಿಬಿರವು ಸಮಾಜಕ್ಕೆ ಮಾದರಿ ಮತ್ತು ಆದರ್ಶಪ್ರಾಯವಾಗಿದೆ. ಮಾನವ ದುಶ್ಚಟಗಳಿಗೆ ಬಲಿಯಾಗಿ ತಮ್ಮ ಜೀವನವನ್ನು ಹಾಳು ಮಾಡಿಕೊಳ್ಳುತ್ತಿದ್ದಾನೆ. ಯಾರು ಆರೋಗ್ಯವಂತರಾಗಿರುತ್ತಾರೋ ಅವರೇ ಶ್ರೀಮಂತರು. ನಿಮ್ಮ ಕುಟುಂಬ ಚೆನ್ನಾಗಿರಲು ಮದ್ಯಪಾನದಿಂದ ದೂರವಿರಿ. ಕುಡಿತದ ಚಟದಿಂದ ನಿಮ್ಮ ಸಂಸಾರ ಹಾಳು ಮಾಡಿಕೊಳ್ಳಬೇಡಿ. ಕಷ್ಟಪಟ್ಟು ದುಡಿದು ಉತ್ತಮ ಜೀವನ ರೂಪಿಸಿಕೊಳ್ಳಿ ಎಂದು ಅವರು ಸಲಹೆ ನೀಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆಯ ಜಿ.ಬಿ. ಸಿದ್ದಪ್ಪ ಮಾತನಾಡಿ, ಹೆತ್ತವರನ್ನು ರಕ್ಷಣೆ ಮಾಡುವುದು ಮಕ್ಕಳ ಧರ್ಮ, ಪ್ರಜೆಗಳ ರಕ್ಷಣೆ ಮಾಡುವುದು ರಾಜನ ಧರ್ಮ, ಭಕ್ತರ ರಕ್ಷಣೆ ಮಾಡುವುದು ಗುರುಗಳ ಧರ್ಮ ಆದರೆ ಬಡವರ, ದೀನ ದಲಿತರ ಹಾಗೂ ಇಂತಹ ಕುಡಿತದ ವ್ಯಸನಿಗಳನ್ನು ಸರಿದಾರಿಗೆ ತರುವ ಕೆಲಸ ಮಾಡುವುದಿದ್ದರೆ ಅದು ಶ್ರೀ ಕ್ಷೇತ್ರ ಧರ್ಮಸ್ಥಳ ಸಂಘದಿಂದ ಮಾತ್ರ ಸಾಧ್ಯ ಎಂದರು.

ಜನಜಾಗೃತಿ ವೇದಿಕೆಯ ಉಪಾಧ್ಯಕ್ಷ ಬಿ.ಮಂಜುನಾಥ ಗುಂಡಗತ್ತಿ ಮಾತನಾಡಿ, ಕುಡಿತದಿಂದ ನಿಮ್ಮ ಜೀವನವನ್ನು ಹಾಳು ಮಾಡಿಕೊಳ್ಳಬೇಡಿ. ಆರೋಗ್ಯ, ದುಡ್ಡು, ಸಮಾಜ ಹಾಗೂ ನಿಮ್ಮ ಕುಟುಂಬವೇ ಹಾಳಾಗಿ ನೀವು ಬೀದಿಗೆ ಬರುತ್ತೀರಿ. ಈ ಕುಡಿತದಿಂದ ಮುಕ್ತರಾಗಿ ಸುಖ ಜೀವನ ನಡೆಸಲು ಸಮಾಜದಲ್ಲಿರುವ ಪ್ರತಿಯೊಬ್ಬನಿಗೂ ಸಂಸ್ಕಾರ ಕೊಡುವ ಕಾರ್ಯ ನಡೆಯಬೇಕು. ಇಂತಹ ಶಿಬಿರಗಳು ಸಮಾಜಕ್ಕೆ ಮಾದರಿ ಎಂದರು.

ತಾಲ್ಲೂಕು ಅಂಬೇಡ್ಕರ್ ಸಂಘದ ಅಧ್ಯಕ್ಷ ನಿಚ್ಚವ್ವನಹಳ್ಳಿ ಭೀಮಪ್ಪ, ಹಾಲೇಶ ಮಾತನಾಡಿದರು.

ಜನಜಾಗೃತಿ ವೇದಿಕೆ ಸದಸ್ಯ ಎಸ್. ಪಿ.ಲಿಂಬ್ಯಾ ನಾಯ್ಕ, ಹರಪನಹಳ್ಳಿ ಧರ್ಮಸ್ಥಳ ಗ್ರಾಮಾಭಿವೃದ್ದಿ ಯೋಜನಾಧಿಕಾರಿ ಸುಬ್ರಹ್ಮಣ್ಯ, ಹರಿಪುರ ಯೋಜನಾಧಿಕಾರಿ ಬಾಬು ಸೇರಿದಂತೆ ಇತರರು ಇದ್ದರು.

# ನಂಜಪ್ಪ ಲೈಫ್ ಕೇರ್‌ನಲ್ಲಿ ಹೃದಯ ಸಂಬಂಧಿ 'ಟಿಎವಿಐ' ಚಿಕಿತ್ಸೆ



ಶಿವಮೊಗ್ಗ, ಅ.16- ಅಧಿಕ ರಕ್ತದೊತ್ತಡ ಸಮಸ್ಯೆ ಹೊಂದಿದ್ದ ಬೆಳ ಗಾವಿಯ 86 ವರ್ಷದ ಮಹಿಳೆಯೊಬ್ಬರಿಗೆ ಇತ್ತೀಚಿಗೆ ನಂಜಪ್ಪ ಲೈಫ್ ಕೇರ್ ಆಸ್ಪತ್ರೆಯಲ್ಲಿ 'ಟ್ರಾನ್ಸ್‌ಕೆಥೆಟರ್ ಅಯೋರ್ಟಿಕ್ ವಾಲ್ವ್ ಇಂಪ್ಲಾಂಟೇಶನ್' (ಟಿಎವಿಐ) ಕಾರ್ಯವಿಧಾನ ಯಶಸ್ವಿಯಾಗಿ ನೆರವೇರಿಸಲಾಯಿತು.

ರೋಗಿಯು ಕಳೆದ ಮೂರು ತಿಂಗಳಿನಿಂದ ವಯೋಸಹಜ ಉಸಿರಾಟದ ತೊಂದರೆ ಅನುಭವಿಸುತ್ತಿದ್ದರು. ಅವರನ್ನು ವೈದ್ಯಕೀಯ ತಪಾಸಣೆಗೆ ಒಳಪಡಿಸಿದಾಗ, ಅವರು ತೀವ್ರವಾದ (ಅಯೋರ್ಟಿಕ್ ಸ್ಟೆನೋಸಿಸ್) ಮಹಾಪಧಮನಿಯ ಕವಾಟ ಕಿರಿದಾಗುವಿಕೆ ಸಮಸ್ಯೆ ಹೊಂದಿರುವುದು ಇದಕ್ಕೆ ಕಾರಣವೆಂದು ಪತ್ತೆಯಾಯಿತು.

ಆಕೆಯ ವಯಸ್ಸು ಮತ್ತು ತೆರೆದ ಹೃದಯ ಶಸ್ತ್ರಚಿಕಿತ್ಸೆಯಿಂದ ಹೆಚ್ಚಿನ ಅಪಾಯ ಸಾಧ್ಯತೆ ಹಿನ್ನೆಲೆಯಲ್ಲಿ, ರೋಗಿ ಮತ್ತು ಆಕೆಯ ಕುಟುಂಬವು ಈ ಶಸ್ತ್ರಚಿಕಿತ್ಸೆ ನಿರಾಕರಿಸಿದ್ದರು. ಪರ್ಯಾಯವಾಗಿ, ಶಸ್ತ್ರಚಿಕಿತ್ಸೆ ರಹಿತ 'ಟ್ರಾನ್ಸ್‌ಕೆಥೆಟರ್ ಅಯೋರ್ಟಿಕ್ ವಾಲ್ವ್ ಇಂಪ್ಲಾಂಟೇಶನ್' (ಟಿಎವಿಐ) ಕಾರ್ಯವಿಧಾನವನ್ನು ಶಿಫಾರಸ್ಸು ಮಾಡಲಾಯಿತು. 'ಟಿಎವಿಐ' ಚಿಕಿತ್ಸೆಯಲ್ಲಿ ಕಿರಿದಾದ ಹೊಂದಿಕೊಳ್ಳುವ ಟ್ಯೂಬ್ ಅನ್ನು (ಕ್ಯಾಥಟರ್ ಎಂದು ಕರೆಯಲಾಗುತ್ತದೆ) ಕಾಲಿನ ಮೇಲಿನ ಭಾಗ ಅಥವಾ ಎದೆಯಲ್ಲಿ ರಕ್ತನಾಳಗಳ ಮೂಲಕ ಹೃದಯದ ಮಹಾಪಧಮನಿಯ ಕವಾಟದ ಕಡೆಗೆ ರವಾನಿಸಿ ಕವಾಟದ ಬದಲಾವಣೆ ಮಾಡಲಾಗುತ್ತದೆ.

ರೋಗಿಯ ಆರೋಗ್ಯ ಸ್ಥಿತಿಯ ಸಮಗ್ರ ಮೌಲ್ಯಮಾಪನದ ನಂತರ, ಆಸ್ಪತ್ರೆಯ ಅತ್ಯಾಧುನಿಕ 'ಹೃದಯ ಕ್ಯಾಥೆಟರೈಸೇಶನ್' ಪ್ರಯೋಗಾಲಯದಲ್ಲಿ 'ಟಿಎವಿಐ' ಕಾರ್ಯವಿಧಾನವನ್ನು ಯಶಸ್ವಿಯಾಗಿ ನಡೆಸಲಾಯಿತು.

# ಓಮರ್ ಅಬ್ದುಲ್ಲಾ ಪ್ರಮಾಣ ವಚನ

ಶ್ರೀನಗರ, ಅ. 16 - ನ್ಯಾಷನಲ್ ಕಾನ್ಫರೆನ್ಸ್ ನಾಯಕ ಓಮರ್ ಅಬ್ದುಲ್ಲಾ ಅವರು ಜಮ್ಮು ಮತ್ತು ಕಾಶ್ಮೀರದ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ.



2019 ರಲ್ಲಿ 370ನೇ ವಿಧಿ ರದ್ದುಗೊಳಿಸಿದ ನಂತರ ಜಮ್ಮು ಮತ್ತು ಕಾಶ್ಮೀರವನ್ನು ಕೇಂದ್ರಾಡಳಿತ ಪ್ರದೇಶವಾಗಿ ಪರಿವರ್ತಿಸಲಾಗಿತ್ತು. ನಂತರ ಅಬ್ದುಲ್ಲಾ ಮೊದಲ ಮುಖ್ಯಮಂತ್ರಿ ಆಗಿದ್ದಾರೆ.

ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿಂಹ ಅವರು ಅಬ್ದುಲ್ಲಾ ಮತ್ತು ಐವರು ಸಚಿವರಿಗೆ ಪ್ರಮಾಣ ವಚನ ಬೋಧಿಸಿದ್ದಾರೆ. ಜಮ್ಮುವಿನ ಸುರಿಂದರ್ ಚೌಧರಿ ಅವರು ಉಪ ಮುಖ್ಯಮಂತ್ರಿಯಾಗಿದ್ದಾರೆ.

ಅಬ್ದುಲ್ಲಾ ಎರಡನೇ ಬಾರಿ ಮುಖ್ಯಮಂತ್ರಿ ಆಗಿದ್ದಾರೆ. ಅಬ್ದುಲ್ಲಾ ಅವರ ತಂದೆ ಫಾರೂಕ್ ಅಬ್ದುಲ್ಲಾ ಹಾಗೂ ತಾತ ಶೇಕ್ ಅಬ್ದುಲ್ಲಾ ಸಹ ಮುಖ್ಯಮಂತ್ರಿಯಾಗಿದ್ದರು.

# ನಗರದಲ್ಲಿ ಇಂದು ಶ್ರೀ ಗಾಯತ್ರಿ ಪೂಜೆ

ಶ್ರೀ ಗಾಯತ್ರಿ ದೇವಿಯ ಉಪಾಸಕರ ಕ್ರಿಯಾತ್ಮಕ ಅಧ್ಯಾತ್ಮ ಸಂಸ್ಥೆ ಶ್ರೀ ಗಾಯತ್ರಿ ಪರಿವಾರದಿಂದ ಶ್ರೀ ಜಯದೇವ ಮುರುಘರಾಜೇಂದ್ರ ವೃತ್ತದಲ್ಲಿರುವ ಶ್ರೀ ಶಂಕರ ಮಠದಲ್ಲಿ ಪ್ರತೀ ತಿಂಗಳ ಹುಣ್ಣಿಮೆಯಂದು ನಡೆಸುವ ಸಾಮೂಹಿಕ ಶ್ರೀ ಗಾಯತ್ರಿ ಪೂಜೆ, ಉಪಾಸನೆ, ಶೀಗಿ ಹುಣ್ಣಿಮೆ ಅಂಗವಾಗಿ ಇಂದು ಬೆಳಿಗ್ಗೆ 7 ಕ್ಕೆ ನಡೆಯಲಿದೆ ಎಂದು ಪರಿವಾರದ ಅಧ್ಯಕ್ಷ ಡಾ. ರಮೇಶ್ ಪಟೇಲ್ ತಿಳಿಸಿದ್ದಾರೆ. ಕೆ.ಹೆಚ್. ಮಂಜುನಾಥ್ ಮತ್ತು ಕುಟುಂಬದವರು ಪೂಜಾ ಸೇವಾಕರ್ತರಾಗಿದ್ದಾರೆ ಎಂದು ಪರಿವಾರದ ಪ್ರಧಾನ ಕಾರ್ಯದರ್ಶಿ ಸಾಲಿಗ್ರಾಮ ಗಣೇಶ್ ಶೆಣೈ ತಿಳಿಸಿದ್ದಾರೆ.

# ಮುಡಾಗೆ ಮರಿಗೌಡ ರಾಜೀನಾಮೆ

ಬೆಂಗಳೂರು, ಅ. 16 - ಸಿಎಂ ಸಿದ್ದರಾಮಯ್ಯ ಅವರು ಮುಡಾ ವಿವಾದಕ್ಕೆ ಸಿಲುಕಿರುವ ನಡುವೆಯೇ, ಮುಡಾ ಅಧ್ಯಕ್ಷ ಕೆ. ಮರಿಗೌಡ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಆರೋಗ್ಯ ಸಮಸ್ಯೆ ಕಾರಣದಿಂದಾಗಿ ಈ ನಿರ್ಧಾರ ತೆಗೆದುಕೊಂಡಿದ್ದೇನೆ. ನನ್ನ ಮೇಲೆ ಯಾವುದೇ ಒತ್ತಡ ಇರಲಿಲ್ಲ ಎಂದು ಮರಿಗೌಡ ಹೇಳಿದ್ದಾರೆ.

# ಸಿಎಂ ಸಿದ್ದರಾಮಯ್ಯಗೆ ಮತ್ತೊಂದು ಸಂಕಷ್ಟ

**(1ನೇ ಪುಟದಿಂದ)** ಪಡಿಸಿಕೊಂಡಿತ್ತು.

ಹೊಸ ಬಡಾವಣೆ ನಿರ್ಮಾಣಕ್ಕೆಂದು ಈ ಜಮೀನಿಗೆ ಭೂಸ್ವಾಧೀನ ಪ್ರಕ್ರಿಯೆ ಮುಗಿಸಿದ್ದ ಪ್ರಾಧಿಕಾರ ಸಂಬಂಧಪಟ್ಟ ಭೂಮಾಲೀಕರಿಗೆ ಪರಿಹಾರದ ಮೊತ್ತವನ್ನು ನಗರದ ಸಿವಿಲ್ ನ್ಯಾಯಾಲಯದಲ್ಲಿ ಠೇವಣಿ ಇಡಲಾಗಿತ್ತು.

ಭೂಸ್ವಾಧೀನದ ನಂತರ ಪ್ರಾಧಿಕಾರ ಈ ಭೂಮಿಯಲ್ಲಿ ಮೂಲಸೌಕರ್ಯ ಕಲ್ಪಿಸಿ 42 ಮಂದಿಗೆ ನಿವೇಶನಗಳನ್ನು ಹಂಚಿಕೆ ಮಾಡಿ ಸ್ವಾಧೀನ ಪತ್ರವನ್ನೂ ನೀಡಿತ್ತು.

ಭೂಮಾಲೀಕರು ನಂತರ ನ್ಯಾಯಾಲಯಕ್ಕೆ ತೆರಳಿ ತಮ್ಮ ಭೂಮಿಯನ್ನು ಡಿ-ನೋಟಿಫೈ ಮಾಡುವಂತೆ ಪ್ರಾಧಿ ಕಾರಕ್ಕೆ ನಿರ್ದೇಶನ ನೀಡುವಂತೆ ಅರ್ಜಿ ಸಲ್ಲಿಸಿದ್ದರು. ಹೈಕೋರ್ಟ್ ಈ ಭೂಮಿ ಬಿಡಿಎಗೆ ಸೇರಿದ್ದು ಎಂದು ತೀರ್ಪು ನೀಡಿತ್ತು. ನಂತರ ಈ ಜಮೀನಿಗೆ ಸಂಬಂಧಿಸಿದ ವ್ಯಕ್ತಿಗಳು ರಾಜಕೀಯವಾಗಿ ಮತ್ತು ಆರ್ಥಿಕವಾಗಿ ಬಲಿಷ್ಠರಾಗಿರುವವರು ಕಾನೂನು ಬಾಹಿರವಾಗಿ ಜಿಪಿಎ ಪಡೆದು ಮತ್ತೆ ನ್ಯಾಯಾಲಯಕ್ಕೆ ತೆರಳಿದರು.

ಆ ಸಂದರ್ಭದಲ್ಲಿ ನ್ಯಾಯಾಲಯ ಅರ್ಜಿದಾರರ ಮನವಿಯನ್ನು ಎತ್ತಿಹಿಡಿಯಿತು. ಇದನ್ನು ನಗರಾಭಿವೃದ್ದಿ ಇಲಾಖೆ ಆದೇಶವನ್ನು ಪ್ರಶ್ನಿಸಲಿಲ್ಲ, ಅಲ್ಲದೆ, ಮೇಲ್ಮನವಿಯನ್ನೂ ಸಲ್ಲಿಸಲಿಲ್ಲ.

ಅಂದು ಮುಖ್ಯಮಂತ್ರಿ ಆಗಿದ್ದ ಸಿದ್ದರಾಮಯ್ಯ ಇವರಿಗೆ ಸಹಾಯ ಮಾಡಲೆಂದೇ ಅಧಿಕಾರಿಗಳ ಮೇಲೆ ಒತ್ತಡ ತಂದು ಮತ್ತೆ ಕಾನೂನು ಸಮರಕ್ಕೂ ಮುಂದಾಗದೆ, ನ್ಯಾಯಾಲಯದ ತೀರ್ಪನ್ನು ಆಧರಿಸಿ ಡಿ-ನೋಟಿಫೈ ಮಾಡಿಕೊಟ್ಟಿದ್ದಾರೆ.

ಇಂತಹ ಸನ್ನಿವೇಶದಲ್ಲಿ ನಗರಾಭಿವೃದ್ಧಿ ಇಲಾಖೆಯ ಕಾನೂನು ಕೋಶದ ಅಧಿಕಾರಿ ಎರ್ಮಲ್ ಕಲ್ಪನಾ ಅವರು ಕಾನೂನಿಗೆ ವಿರುದ್ಧವಾದ ಅಭಿಪ್ರಾಯ ನೀಡಿರುವುದು ಕಂಡುಬಂದಿದೆ.

ಇವರು ನೀಡಿದ ವರದಿ ಆಧಾರದ ಮೇಲೆ ಸಿದ್ದರಾಮಯ್ಯ ಜಾಣ್ಮೆಯಿಂದ ತಮಗೆ ಅನುಕೂಲಕರ ರೀತಿಯಲ್ಲಿ ಕಾನೂನು ಬಳಕೆ ಮಾಡಿಕೊಂಡಿರುವುದು ಸ್ಪಷ್ಟವಾಗಿದೆ ಎಂದು ದೂರಿನಲ್ಲಿ ಆರೋಪಿಸಿದ್ದಾರೆ.

# ಸರ್ಕಾರಿ ನೌಕರರ ಸಂಘದ ಚುನಾವಣೆಗೆ ರೇವಣಸಿದ್ದಪ್ಪ ಅಂಗಡಿ ನಾಮಪತ್ರ ಸಲ್ಲಿಕೆ



ಹರಿಹರ, ಅ.16- ರಾಜ್ಯ ಸರ್ಕಾರಿ ನೌಕರರ ಸಂಘದ 2024 ರಿಂದ 2029 ರ ಅವಧಿಯ ನಿರ್ದೇಶಕರ ಮತ್ತು ರಾಜ್ಯ ಪರಿಷತ್ ಸದಸ್ಯರ ಚುನಾವಣೆಯು ತಾಲ್ಲೂಕು, ಜಿಲ್ಲಾ ಹಾಗೂ ರಾಜ್ಯ ಹಂತದಲ್ಲಿ ವಿವಿಧ ದಿನಾಂಕಗಳಂದು ನಡೆಯಲಿದೆ.

ಹರಿಹರ ತಾಲ್ಲೂಕು ಹಂತದ ನಿರ್ದೇಶಕರ ಹುದ್ದೆಗೆ ಸಿ.ಎಸ್. ಷಡಕ್ಷರಿ ಅವರ ಗುಂಪಿನಿಂದ ಸರ್ಕಾರಿ ಪ್ರೌಢಶಾಲೆಯ ಶಿಕ್ಷಕ ರೇವಣಸಿದ್ದಪ್ಪ ಅಂಗಡಿ ಇಂದು ನಾಮಪತ್ರ ಸಲ್ಲಿಸಿದರು.

ನಾಮಪತ್ರಕ್ಕೆ ಸೂಚಕರಾಗಿ ಕೆ. ಆರ್. ಮಂಜುನಾಥ, ಅನುಮೋದಕರಾಗಿ ಮಲ್ಲಿಕಾರ್ಜುನಪ್ಪ ಎಂ. ಸಹಿ ಹಾಕಿದರು. ಹರಿಹರ ತಾಲೂಕಿನಲ್ಲಿ ಒಟ್ಟು 1720 ಜನ ಸರ್ಕಾರಿ ನೌಕರರಿದ್ದು, 24 ಇಲಾಖೆಯ ಕ್ಷೇತ್ರಗಳಿಂದ ಒಟ್ಟು 34 ಜನ ನಿರ್ದೇಶಕರ ಆಯ್ಕೆ ನಡೆಯಲಿದೆ. ಬಹುತೇಕ ಇಲಾಖೆಗಳಲ್ಲಿ ಅವಿರೋಧ ಆಯ್ಕೆ ನಡೆಯುವ ಸಂಭವವಿದೆ. ಶಿಕ್ಷಣ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಕಂದಾಯ ಇಲಾಖೆಗಳಲ್ಲಿ ಚುನಾವಣೆ ಆಗಬಹುದು.

ನಾಮಪತ್ರ ಸಲ್ಲಿಸುವ ಸಂದರ್ಭದಲ್ಲಿ ಪ್ರೌಢಶಾಲಾ ಮುಖ್ಯೋಪಾಧ್ಯಾಯರ ಸಂಘದ ಅಧ್ಯಕ್ಷ ಕುಬೇಂದ್ರ ಮೆಕ್ಕಪ್ಪನವರ್, ಮುಖ್ಯೋಪಾಧ್ಯಾಯರುಗಳಾದ ಸುರೇಶ್ ಕೆ. ಎಂ., ಮಂಜಪ್ಪ ಯು. ಎಂ., ಹನುಮಂತಪ್ಪ ಎಸ್., ಮಲ್ಲಿಕಾರ್ಜುನಪ್ಪ ಎಂ., ಶಿಕ್ಷಕರಾದ ರಿಯಾಜ್ ಅಹಮದ್, ಸೈಯಿದಾ ಕೌಸರ್, ಫರಜಾನ ಬಾನು, ರತ್ನವ್ವ ಸಾಲಿಮಠ, ಸಪೂರಾಬಿ, ಫರೀದಾ ಬೇಗಂ, ನಿವೃತ್ತ ಉಪನ್ಯಾಸಕ ಜಿ.ಆರ್. ಕಲ್ಲಪ್ಪ, ಶಿಕ್ಷಣ ಸಂಯೋಜಕ ಹರೀಷ್ ನೋಟಗಾರ್, ಪಿ. ಶಿವಮೂರ್ತಿ, ಗದಿಗೆಪ್ಪ ವೈ. ಹಳೆಮನೆ ಮುಂತಾದವರಿದ್ದರು.

# ಮಾಹಿತಿ ಸಂಗ್ರಹಿಸಿ ಸ್ಯಾಟ್‌ಕಾಮ್ ಸ್ಪೆಕ್ಟ್ರಮ್ ನಿರ್ಧಾರ : ಟ್ರಾಯ್

## ಉಪಗ್ರಹ ಸ್ಪೆಕ್ಟ್ರಮ್ ಬಗ್ಗೆ ಎಲಾನ್ ಮಸ್ಕ್, ಜಿಯೋ ನಡುವೆ ಜಟಾಪಟಿ

ನವದೆಹಲಿ, ಅ. 16 - ಎಲ್ಲ ಮಾಹಿತಿಯನ್ನು ಸಂಗ್ರಹಿಸಿದ ನಂತರ ಸ್ಯಾಟ್‌ಕಾಮ್ ಸ್ಪೆಕ್ಟ್ರಮ್ ವಿತರಣೆಗೆ ಸಂಬಂಧಿಸಿದಂತೆ ತನ್ನ ನಿಲುವು ನಿರ್ಧರಿಸುವುದಾಗಿ ಟೆಲಿಕಾಂ ನಿಯಂತ್ರಕ ಟ್ರಾಯ್ ಅಧ್ಯಕ್ಷ ಅನಿಲ್ ಕುಮಾರ್ ಲಹೋಟಿ ತಿಳಿಸಿದ್ದಾರೆ.

ಉಪಗ್ರಹ ತರಂಗಗುಚ್ಛವಾದ ಸ್ಯಾಟ್‌ಕಾಮ್ ಸ್ಪೆಕ್ಟ್ರಮ್ ವಿತರಣೆಗೆ ಸಂಬಂಧಿಸಿದಂತೆ ಸ್ಟಾರ್‌ಲಿಂಕ್ ಸಿಇಒ ಎಲಾನ್ ಮಸ್ಕ್ ಹಾಗೂ ಭಾರತೀಯ ಉದ್ಯಮಿಗಳ ನಡುವೆ ಜಟಾಪಟಿ ನಡೆದಿತ್ತು.

ಉಪಗ್ರಹ ಆಧರಿತ ಸಂಪರ್ಕ ಸೇವೆಗಳಿಗೆ ಸಂಬಂಧಿಸಿದ ಕೆಲ ಶಿಫಾರಸ್ಸುಗಳನ್ನು ಬದಲಿಸಬೇಕು ಎಂದು ಜಿಯೋ ಟೆಲಿಕಾಂ ಕಂಪನಿ ಆಗ್ರಹಿಸಿತ್ತು.

ಟೆಲಿಕಾಂ ಇಲಾಖೆಯಿಂದ ನಮಗೆ ಪ್ರಸ್ತಾವನೆ ಕಳಿಸಲಾಗಿದೆ. ಈ ಬಗ್ಗೆ ನಾವು ಸಮಾಲೋಚನೆ ಆರಂಭಿಸಿದ್ದೇವೆ. ಎಲ್ಲ ಮಾಹಿತಿಯನ್ನು ಸಂಗ್ರಹಿಸಿದ ನಂತರ ನಮ್ಮ ನಿಲುವು ತಿಳಿಸುತ್ತೇವೆ ಎಂದು ಅನಿಲ್ ಕುಮಾರ್ ಲಹೋಟಿ ಹೇಳಿದ್ದಾರೆ.

ನೆಲದ ಮೇಲಿಂದ ಒದಗಿಸುವ ಸೇವೆ ಹಾಗೂ ಉಪಗ್ರಹದ ಮೂಲಕ ಒದಗಿಸುವ ಸೇವೆಗಳಿಗೆ ಸಮಾನ ವೇದಿಕೆ ಇರಬೇಕು ಎಂದು ರಿಲೈಯನ್ಸ್ ಜಿಯೋ ಬೇಡಿಕೆ ಮುಂದಿಟ್ಟಿತ್ತು.

ಸ್ಪೆಕ್ಟ್ರಮ್ ಅನ್ನು ಹರಾಜಿನ ಮೂಲಕ ವಿತರಣೆ ಮಾಡಬೇಕು ಎಂದು ರಿಲೈಯನ್ಸ್ ಮುಖ್ಯಸ್ಥ ಮುಕೇಶ್ ಅಂಬಾನಿ ಹಾಗೂ ಏರ್‌ಟೆಲ್‌ನ ಸುನೀಲ್ ಭಾರತಿ ಮಿತ್ತಲ್ ಅಭಿಪ್ರಾಯ ಪಟ್ಟಿದ್ದರು. ಆದರೆ, ಸ್ಪೆಕ್ಟ್ರಮ್ ಹರಾಜನ್ನು ಎಲಾನ್ ಮಸ್ಕ್ ವಿರೋಧಿಸಿದ್ದರು. ಜಾಗತಿಕ ಪದ್ಧತಿಯ ಅನ್ವಯ ಆಡಳಿತಾತ್ಮಕ ಅನುಮೋದನೆಯ ಮೂಲಕ ಸ್ಪೆಕ್ಟ್ರಮ್ ವಿತರಿಸಬೇಕು ಎಂದು ಮಸ್ಕ್ ಅವರ ನೇತೃತ್ವದ ಸ್ಟಾರ್‌ಲಿಂಕ್ ಒತ್ತಾಯಿಸುತ್ತಿದೆ. ಈ ವಾದಕ್ಕೆ ಬೆಂಬಲಿಸಿದ್ದ ಟೆಲಿಕಾಂ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ, ಆಡಳಿತಾತ್ಮಕ ಪ್ರಕ್ರಿಯೆ ಮೂಲಕ ಸ್ಪೆಕ್ಟ್ರಮ್ ವಿತರಿಸಬೇಕು ಎಂದಿದ್ದರು.

ವಿಶ್ವದಾದ್ಯಂತ ಸ್ಪೆಕ್ಟ್ರಮ್ ಅನ್ನು ಆಡಳಿತಾತ್ಮಕವಾಗಿ ವಿತರಿಸಲಾಗುತ್ತದೆ. ಭಾರತ ಸಹ ವಿಶ್ವದ ಪದ್ಧತಿಗಿಂತ ಹೊರತಾಗಿ ನಡೆದುಕೊಳ್ಳಲು ಸಾಧ್ಯವಾಗದು. ಹರಾಜಿಗೆ ಮುಂದಾದದಲ್ಲಿ ವಿಶ್ವದ ಪದ್ಧತಿಗಿಂತ ವಿರುದ್ಧವಾಗಿ ನಡೆದಂತಾಗುತ್ತದೆ ಎಂದು ಸಚಿವರು ಹೇಳಿದ್ದರು.

# ಅಪರಿಚಿತ ಪುರುಷನ ಶವ ಪತ್ತೆ

ದಾವಣಗೆರೆ, ಅ. 16- ಸುಮಾರು 65 ರಿಂದ 70 ವರ್ಷ ವಯಸ್ಸಿನ ಅಪರಿಚಿತ ಪುರುಷನ ಶವ ಪತ್ತೆಯಾಗಿದ್ದು, ದುಂಡು ಮುಖ, ಎಣ್ಣೆಗೆಂಪು ಮೈಬಣ್ಣ, ತಲೆಯಲ್ಲಿ ಎರಡೂವರೆ ಇಂಚು ಕಪ್ಪು-ಬಿಳಿ ಕೂದಲು, ಕಪ್ಪು-ಬಿಳಿ ಬಣ್ಣದ ಗಡ್ಡ, ಮೀಸೆ ಬಿಟ್ಟಿದ್ದು, ಬಾಯಲ್ಲಿ ಹುಣ್ಣು ಇರುತ್ತದೆ. ಮುಖ ವಿಕಾರವಾಗಿರುತ್ತದೆ.

ಈತನ ವಾರಸುದಾರರಿದ್ದಲ್ಲಿ ನಗರದ ಆರ್‌ಎಂಸಿ ಯಾರ್ಡ್ ಪೊಲೀಸ್ ಠಾಣೆಗೆ (08192-259337, 9480803248, 08192-272008) ಸಂಪರ್ಕಿಸಬಹುದು.

# ಕಡದಕಟ್ಟೆ ಗ್ರಾ.ಪಂ ಉಪಾಧ್ಯಕ್ಷರಾಗಿ ಹನುಮಂತಮ್ಮ



ಹೊನ್ನಾಳಿ, ಅ.16- ತಾಲ್ಲೂಕಿನ ಹೆಚ್. ಕಡದಕಟ್ಟೆ ಗ್ರಾಮ ಪಂಚಾಯಿತಿ ಉಪಾಧ್ಯಕ್ಷರಾಗಿ ಹನುಮಂತಮ್ಮ ಮಂಜಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಚುನಾವಣಾಧಿಕಾರಿಯಾಗಿ ಆರ್.ಎಫ್. ಷಣ್ಮುಖ ಕಾರ್ಯನಿರ್ವಹಿಸಿದರು.

ಪಂಚಾಯಿತಿ ಅಧ್ಯಕ್ಷೆ ಹೊಳೆಮಾದಾಪುರ ಪವಿತ್ರ, ಬಿದರಗಡ್ಡೆ ಗ್ರಾಮದ ಸದಸ್ಯ ಕುಮಾರಣ್ಣ, ರಾಜಪ್ಪ, ಕಡದಕಟ್ಟೆ ಗ್ರಾಮದ ಮಂಜಪ್ಪ, ಅನಿತಾ, ಹೊಳೆಮಾದಾಪುರ ಶಶಿಕಲಾ, ಕಾರ್ಯದರ್ಶಿ ಬಿ. ಮಲ್ಲೇಶಪ್ಪ, ಪಿಡಿಓ ವಿಜಯಗೌಡ, ಮಲ್ಲಿಕಾ ಇದ್ದರು.

# ಬಿಜೆಪಿಯ ಮೊದಲ ಸಕ್ರಿಯ ಸದಸ್ಯರಾದ ನರೇಂದ್ರ ಮೋದಿ

ನವದೆಹಲಿ, ಅ. 16 - ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಬಿಜೆಪಿಯ ಸಕ್ರಿಯ ಸದಸ್ಯತ್ವ ಅಭಿಯಾನದಲ್ಲಿ ಮೊದಲ ಸದಸ್ಯರಾಗಿ ಸೇರ್ಪಡೆಯಾಗಿದ್ದಾರೆ.

ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಹಾಗೂ ಪ್ರಧಾನ ಕಾರ್ಯದರ್ಶಿ ವಿನೋದ್ ತಾವಡೆ ಅವರ ಉಪಸ್ಥಿತಿಯಲ್ಲಿ ಪ್ರಧಾನಿ ಸಕ್ರಿಯ ಸದಸ್ಯತ್ವ ಪಡೆದಿದ್ದಾರೆ.

ಪ್ರತಿ ಬೂತ್ ಇಲ್ಲವೇ ವಿಧಾನಸಭಾ ಕ್ಷೇತ್ರಗಳಲ್ಲಿ ತಲಾ 50 ವ್ಯಕ್ತಿಗಳನ್ನು ಸಕ್ರಿಯ ಸದಸ್ಯರಾಗಿ ಸೇರ್ಪಡೆ ಮಾಡಿಕೊಳ್ಳಲು ಬಿಜೆಪಿ ಉದ್ದೇಶಿಸಿದೆ. ಬಿಜೆಪಿಯ ಸದಸ್ಯತ್ವ ಅಭಿಯಾನ ಪೂರ್ಣಗೊಂಡ ನಂತರ ಸಕ್ರಿಯ ಸದಸ್ಯತ್ವ ಅಭಿಯಾನ ಆರಂಭವಾಗಲಿದೆ.

# ಜಿಗಳಿ : 50 ಕ್ಕೂ ಹೆಚ್ಚು ಜನರಿಂದ ರಕ್ತದಾನ




## ರಕ್ತದಾನದಿಂದ ಉತ್ತಮ ಆರೋಗ್ಯ : ಡಾ।। ಚೇತನ್

ಮಲೇಬೆನ್ನೂರು, ಅ.16- ಜಿಗಳಿ ಗ್ರಾಮದ ಗ್ರಾ.ಪಂ.ಕಛೇರಿಯಲ್ಲಿ ಹೊಳೆಸಿರಿಗೆರೆ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ದಾವಣಗೆರೆ ಸಿ.ಜಿ. ಆಸ್ಪತ್ರೆಯ ರಕ್ತ ನಿಧಿ ಕೇಂದ್ರ ಹಾಗೂ ಜಿಗಳಿ ಗ್ರಾ.ಪಂ. ವತಿಯಿಂದ ಬುಧವಾರ ಸ್ವಯಂ ಪ್ರೇರಿತ ರಕ್ತದಾನ ಶಿಬಿರ ನಡೆಯಿತು.

ಈ ವೇಳೆ ಮಾತನಾಡಿದ ವೈದ್ಯಾಧಿಕಾರಿ ಡಾ।। ಚೇತನ್ ಅವರು, 18 ರಿಂದ 60 ವರ್ಷದೊಳಗಿನ ಆರೋಗ್ಯವಂತ ವ್ಯಕ್ತಿ ಅಥವಾ ಕನಿಷ್ಠ 45 ಕೆ.ಜಿ. ತೂಕ ಇರುವ ವ್ಯಕ್ತಿ ರಕ್ತದಾನ ಮಾಡಬಹುದು. ರಕ್ತದಾನ ಮಾಡುವುದರಿಂದ ದೇಹದಲ್ಲಿ ಹೊಸ ರಕ್ತ ಉತ್ಪತ್ತಿಯಾಗಲು ಅನುಕೂಲವಾಗುತ್ತದೆ.

ದೇಹದಲ್ಲಿ ಹೊಸ ರಕ್ತ ಚಲನೆಯಿಂದ ಕಾರ್ಯ ತತ್ಪರತೆ ಹಾಗೂ ಜ್ಞಾಪಕ ಶಕ್ತಿ ವೃದ್ಧಿಯಾಗುತ್ತದೆ. ರಕ್ತದಲ್ಲಿ ಕೊಬ್ಬಿನಾಂಶ ಕಡಿಮೆ ಮಾಡಲು ಸಹಾಯ ಮಾಡುತ್ತದೆ. ಹೃದಯಾಘಾತವನ್ನು ಶೇ.70 ಕ್ಕಿಂತಲು ಜಾಸ್ತಿ ತಡೆಯಲು ಸಹಾಯವಾಗುತ್ತದೆ. ರಕ್ತದ ಒತ್ತಡ ಸೇರಿದಂತೆ ಇತರೆ ರೋಗಗಳನ್ನು ತಡೆಗಟ್ಟಲು ಸಹಾಯವಾಗುತ್ತದೆ ಎಂದು ಚೇತನ್ ತಿಳಿಸಿದರು.

ತಾಲ್ಲೂಕು ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಎಂ.ಉಮ್ಮಣ್ಣ ಮಾತನಾಡಿ, ರಕ್ತದಾನ ಜೀವ ರಕ್ಷಕವಾಗಿದ್ದು, ಪ್ರಪಂಚವನ್ನು ಆರೋಗ್ಯಕರ ಸ್ಥಳವನ್ನಾಗಿಸಬಹುದೆಂದರು.

ಜಿಗಳಿ ಗ್ರಾಮಸ್ಥರು ಕಳೆದ ವರ್ಷವೂ 50 ಪಾಕೆಟ್ ರಕ್ತದಾನ ಮಾಡಿದ್ದರೆಂದು ಸ್ಮರಿಸಿದ ರಕ್ತನಿಧಿ ಕೇಂದ್ರದ ಡಾ।। ಅಕ್ಷಯ್ ಅವರು, ರಕ್ತದಾನದಲ್ಲಿ ಜಿಗಳಿಯ ಯುವಕರು ಮಾದರಿ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಪತ್ರಕರ್ತ ಪ್ರಕಾಶ್, ಪಿಡಿಓ ಉಮೇಶ್, ಗ್ರಾ.ಪಂ. ಸಿಬ್ಬಂದಿಗಳಾದ ಪ್ರಕಾಶ್, ಮೃತ್ಯುಂಜಯ, ಬಸವರಾಜಯ್ಯ, ಗ್ರಾಮದ ಯುವಕರಾದ ಪ್ರವೀಣ್, ತರುಣ್, ರಾಜು, ಚಿನ್ನು, ಆಕಾಶ್, ಕಾಂತ, ಪಾರ್ಥ, ಪೃಥ್ವಿ, ಬೆಣ್ಣೇರ್ ರಂಗನಾಥ್, ಬಾರಿಕೆರೆ ಕುಮಾರ್, ಭೋವಿ ವೀರೇಶ್, ಎ.ಕೆ. ಕಾಲೋನಿಯ ಮಂಜು ಸೇರಿದಂತೆ 50 ಕ್ಕೂ ಹೆಚ್ಚು ಜನ ರಕ್ತದಾನ ಮಾಡಿ ಮಾನವೀಯತೆ ಮೆರೆದರು.

ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್ ಅವರು ರಕ್ತದಾನ ಮಾಡಿದ ಯುವಕರನ್ನು ಅಭಿನಂದಿಸಿ ಪ್ರಮಾಣ ಪತ್ರ ನೀಡಿದರು.

ಗ್ರಾ.ಪಂ. ಅಧ್ಯಕ್ಷೆ ಶ್ರೀಮತಿ ರೂಪಾ ಸೋಮಶೇಖರ್, ಉಪಾಧ್ಯಕ್ಷ ಡಿ.ಎಂ. ಹರೀಶ್, ಸದಸ್ಯ ಕೆ.ಜಿ. ಬಸವರಾಜ್, ಗ್ರಾ.ಪಂ. ಕಾರ್ಯದರ್ಶಿ ಸುಜಾತ, ಬಿ. ಮೌನೇಶ್, ಹೊಳೆಸಿರಿಗೆರೆ ಪ್ರಾಥಮಿಕ ಆರೋಗ್ಯ ಕೇಂದ್ರದ ತಿಪ್ಪೇಸ್ವಾಮಿ, ಸವಿತಾ, ಪ್ರಹ್ಲಾದ್, ಪೂಜಾ, ದಾವಣಗೆರೆ ಸಿ.ಜಿ. ಆಸ್ಪತ್ರೆಯ ರಕ್ತನಿಧಿ ಕೇಂದ್ರದ ರಾಘವೇಂದ್ರ, ಶಿಲ್ಪಾ, ಶೈಲ, ಲೋಕೇಶ್, ಕಿಶೋರ್, ಆಶಾ ಕಾರ್ಯಕರ್ತೆ ಯರಾದ ಜಿಗಳಿಯ ವನಜಾಕ್ಷಿ, ನೇತ್ರಾವತಿ, ಶಂಕ್ರಮ್ಮ, ಲತಾ, ಮಂಜುಳಾ, ಯಲವಟ್ಟಿಯ ನೇತ್ರಾಬಾಯಿ, ನಿರ್ಮಲ ಮತ್ತಿತರರು ಈ ವೇಳೆ ಹಾಜರಿದ್ದು ಶಿಬಿರದ ಯಶಸ್ಸಿಗೆ ಶ್ರಮಿಸಿದರು.


## ಚಿರಸ್ಮರಣೆ



**ದಿ।। ಶ್ರೀ ಎಸ್. ಸಿದ್ದರಾಮಪ್ಪ,** ನಿವೃತ್ತ ಇಂಜಿನಿಯರ್

ನೀವು ನಮ್ಮನ್ನಗಲಿ 26 ವಸಂತಗಳು ಪೂರೈಸಿದವು.
ನೀವು ತೋರಿಸಿದ ಮಾರ್ಗದರ್ಶನದಂತೆ ಮುನ್ನಡೆಯುತ್ತಿದ್ದು,
ಸದಾ ನಿಮ್ಮ ಸ್ಮರಣೆಯಲ್ಲಿರುವ

**ಪತ್ನಿ : ಸಿದ್ದಮ್ಮ ಎಸ್., ಮತ್ತು ಮಕ್ಕಳು,**
**ಅಳಿಯಂದಿರು ಹಾಗೂ ಕುಟುಂಬ ವರ್ಗದವರು**
**ಮಗ : ಮರುಳಸಿದ್ದೇಶ್ವರ ಎಸ್.,** ಪ್ರಥಮ ದರ್ಜೆ ಸಹಾಯಕರು,
ಪಂ.ರಾ. ಇಂ. ಉಪ-ವಿಭಾಗ, ದಾವಣಗೆರೆ. 99868 47717


# ಮಲೇಬೆನ್ನೂರಿನಲ್ಲಿ ಇಂದು ಕಾಳಿಕಾ ಹೋಮ, ನಾಳೆ ಎಡೆ ಜಾತ್ರೆ

ಶ್ರೀ ಬೀರಲಿಂಗೇಶ್ವರ ದೇವಸ್ಥಾನದಲ್ಲಿ ವಿಜಯದಶಮಿ ಮತ್ತು ಮರಿಬನ್ನಿ ಅಂಗವಾಗಿ ಸಾಮೂಹಿಕ ವಿವಾಹ ಹಾಗೂ ದೊಡ್ಡ ಎಡೆ ಜಾತ್ರೆ ನಾಳೆ ಶುಕ್ರವಾರ ಬೆಳಗ್ಗೆ 10 ರಿಂದ ಜರುಗಲಿದೆ. ಇಂದು ಸಂಜೆ 6 ರಿಂದ 8 ರವರೆಗೆ ಕಾಳಿಕಾ ಹೋಮ ಮತ್ತು ರಾತ್ರಿ 10 ರಿಂದ ಬೀರಪ್ಪನ ಒಡ್ಡೋಲಗವು ಡೊಳ್ಳು, ವೀರಗಾಸೆಯೊಂದಿಗೆ ನಡೆಯಲಿದೆ.

# ಸಂಸತ್ ಭವನದ ಜಾಗ ವಕ್ಫ್‌ಗೆ ಸೇರಿದ್ದು : ಅಜ್ಮಲ್

ಗುವಾಹತಿ, ಅ. 16 - ಸಂಸತ್ ಭವನ ಹಾಗೂ ಸುತ್ತಲಿನ ಪ್ರದೇಶಗಳು ವಕ್ಫ್ ಆಸ್ತಿ ಎಂದು ಎ.ಐ.ಯು.ಡಿ.ಎಫ್. ಅಧ್ಯಕ್ಷ ಬದ್ರುದ್ದೀನ್ ಅಜ್ಮಲ್ ಹೇಳಿದ್ದಾರೆ. ಪತ್ರಕರ್ತರೊಂದಿಗೆ ಮಾತನಾಡಿದ ಅವರು, ರಾಜಧಾನಿ ದೆಹಲಿಯ ವಸಂತ್ ವಿಹಾರದಿಂದ ಹಿಡಿದು ವಿಮಾನ ನಿಲ್ದಾಣದವರೆಗಿನ ಪ್ರದೇಶ ವಕ್ಫ್ ಆಸ್ತಿ. ಅನುಮತಿ ಪಡೆಯದೆ ವಕ್ಫ್ ಆಸ್ತಿ ಬಳಸುವುದು ತಪ್ಪು ಎಂದವರು ಹೇಳಿದ್ದಾರೆ. ಅಜ್ಮಲ್ ಹೇಳಿಕೆಯನ್ನು ಬೆಂಬಲಿಸಿರುವ ಮಹಾರಾಷ್ಟ್ರದ ಸಮಾಜವಾದಿ ಪಕ್ಷದ ಶಾಸಕ ಅಬು ಅಸಿಮ್ ಅಜ್ಮಿ, ಒಂದು ಬಾರಿ ವಕ್ಫ್ ಆಸ್ತಿಯಾಗಿದ್ದು ಸದಾ ಕಾಲ ವಕ್ಫ್ ಆಸ್ತಿಯಾಗಿ ಉಳಿಯುತ್ತದೆ. ವಕ್ಫ್ ಆಸ್ತಿ ಬಳಸುತ್ತಿರುವುದಕ್ಕಾಗಿ ಬಾಡಿಗೆ ನೀಡಬೇಕು ಎಂದಿದ್ದಾರೆ.



ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ



# ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ


ಹಾಗೂ

# ಶ್ರೀ ಮಹರ್ಷಿ ವಾಲ್ಮೀಕಿ ಪ್ರಶಸ್ತಿ ಪ್ರದಾನ ಸಮಾರಂಭ

**ದಿನಾಂಕ : 17-10-2024, ಗುರುವಾರ**

ಶ್ರೀ ಮಹರ್ಷಿ ವಾಲ್ಮೀಕಿ ಪ್ರತಿಮೆಗೆ ಮಾಲಾರ್ಪಣೆ : ಸಮಯ ಬೆಳಿಗ್ಗೆ 9.30 ಗಂಟೆಗೆ
ಸ್ಥಳ : ಶ್ರೀ ಮಹರ್ಷಿ ವಾಲ್ಮೀಕಿ ತಪೋವನ, ಶಾಸಕರ ಭವನದ ಮುಂಭಾಗ

ವೇದಿಕೆ ಕಾರ್ಯಕ್ರಮ : ಬೆಳಿಗ್ಗೆ 10.30 ಗಂಟೆಗೆ
ಸ್ಥಳ : ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಬೆಂಗಳೂರು



ಕೂಜಂತಂ ರಾಮ ರಾಮೇತಿ ಮಧುರಂ ಮಧುರಾಕ್ಷರಂ ||
ಆರುಹ್ಯ ಕವಿತಾಶಾಖಾಂ ವಂದೇ ವಾಲ್ಮೀಕಿ ಕೋಕಿಲಂ ||

- ಬಸವನಗುಡಿಯ ಶ್ರೀ ಮಹರ್ಷಿ ವಾಲ್ಮೀಕಿ ಮಹಾಸಂಸ್ಥಾನ ಆದಿಗುರುಪೀಠ ಶ್ರೀ ಬೇಡರಕಣ್ಣಪ್ಪ ಸ್ವಾಮಿ ದೇವಸ್ಥಾನದಿಂದ ವಾಲ್ಮೀಕಿ ಜ್ಯೋತಿ ಆಗಮನ
- ಶ್ರೀ ಬಸವೇಶ್ವರ ವೃತ್ತದಿಂದ ಶ್ರೀ ಮಹರ್ಷಿ ವಾಲ್ಮೀಕಿ ಭಾವಚಿತ್ರವನ್ನು ಸಾರೋಟಿನಲ್ಲಿ ಮೆರವಣಿಗೆ
- ಬುಡಕಟ್ಟು ಕಲಾ ತಂಡಗಳ ಪ್ರದರ್ಶನ

## ಸರ್ಕಾರದ ನಡೆ... ಬುಡಕಟ್ಟು ಸಮುದಾಯಗಳ ಅಭಿವೃದ್ಧಿಯ ಕಡೆ...

- ಪರಿಶಿಷ್ಟ ಪಂಗಡದವರ ಕಲ್ಯಾಣಕ್ಕಾಗಿ ಪತ್ಯೇಕ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವಾಲಯ ಪ್ರಾರಂಭ.
- ಪ್ರಸಕ್ತ ಸಾಲಿನಲ್ಲಿ ಟಿಎಸ್‌ಪಿ ಯೋಜನೆಯಡಿ ಪರಿಶಿಷ್ಟ ಪಂಗಡದವರ ಅಭಿವೃದ್ಧಿಗಾಗಿ ರೂ. 11447.51 ಕೋಟಿ ಮೀಸಲು.
- ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಹಾಗೂ ನಿಗಮಗಳಿಗೆ ರೂ. 1722.44 ಕೋಟಿ ಅನುದಾನ ಹಂಚಿಕೆ.

- ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಕಾಯ್ದೆ ಪರಿಣಾಮಕಾರಿ ಜಾರಿ, 2014-15ರಿಂದ ರೂ. 84988.33 ಕೋಟಿ ಟಿಎಸ್‌ಪಿ ಯಡಿ ಹಂಚಿಕೆ.
- ಶಾಸಕರ ಭವನ ಮುಂಭಾಗದ ತಪೋವನದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಪುತ್ಥಳಿ ನಿರ್ಮಾಣ.
- 533 ವಸತಿ ಶಾಲೆ/ವಿದ್ಯಾರ್ಥಿ ನಿಲಯಗಳಲ್ಲಿ 86234 ವಿದ್ಯಾರ್ಥಿಗಳಿಗೆ ಶಿಕ್ಷಣ ಸೌಲಭ್ಯ.
- ಕಾಲೋನಿಗಳಲ್ಲಿ ಮೂಲಭೂತ ಸೌಕರ್ಯ – 2368 ವಾಲ್ಮೀಕಿ ಭವನ ಮಂಜೂರು.
- 5,50,000 ವಿದ್ಯಾರ್ಥಿಗಳಿಗೆ ರೂ.205 ಕೋಟಿ 2023-24 ನೇ ಸಾಲಿನಲ್ಲಿ ವಿದ್ಯಾರ್ಥಿ ವೇತನ ವಿತರಣೆ.
- ಪರಿಶಿಷ್ಟ ಪಂಗಡದ 12 ಬುಡಕಟ್ಟು ಸಮುದಾಯದ 47,859 ಕುಟುಂಬಗಳಿಗೆ ವಾರ್ಷಿಕವಾಗಿ ರೂ.140.00 ಕೋಟಿ ವೆಚ್ಚದಲ್ಲಿ ಪೌಷ್ಠಿಕ ಆಹಾರ ವಿತರಣೆ.
- ಯುಪಿಎಸ್‌ಸಿ, ಕೆಪಿಎಸ್‌ಸಿ ಸೇರಿದಂತೆ ಇತರೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ.
- ಪರಿಶಿಷ್ಟ ಪಂಗಡದ 5000 ಯುವಕ/ಯುವತಿಯರಿಗೆ ಡ್ರೋನ್ ಆಧಾರಿತ ಫೋಟೋಗ್ರಫಿ ಮತ್ತು ವೀಡಿಯೋಗ್ರಫಿ ತರಬೇತಿ ಕಾರ್ಯಕ್ರಮ.
- "ಪ್ರಬುದ್ಧ" ಯೋಜನೆಯಡಿ ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ವ್ಯಾಸಂಗ ಕಾರ್ಯಕ್ರಮ ಅನುಷ್ಠಾನ.
- 74,367 ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ.
- ಮಹರ್ಷಿ ವಾಲ್ಮೀಕಿ ಆದಿವಾಸಿ ಬುಡಕಟ್ಟು ವಸತಿ ಶಾಲೆಗಳಲ್ಲಿ ಹೊಸದಾಗಿ 6 ಮತ್ತು 8ನೇ ತರಗತಿ ಪ್ರಾರಂಭ, 14238 ರಿಂದ 47600 ವಿದ್ಯಾರ್ಥಿಗಳಿಗೆ ಅವಕಾಶ.
- ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಿಂದ ಸ್ವಯಂ ಉದ್ಯೋಗ, ಗಂಗಾ ಕಲ್ಯಾಣ ಹಾಗೂ ಮೈಕ್ರೋ ಕ್ರೆಡಿಟ್ ಯೋಜನೆಗಳ ಅನುಷ್ಠಾನ.





## ನುಡಿದಂತೆ ನಡೆದಿದ್ದೇವೆ...

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ ಕೆ ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ತಾರತಮ್ಯ ನಿರ್ಮೂಲನೆಗೆ | ಶಕ್ತಿ
ಹಸಿವು ನಿರ್ಮೂಲನೆಗೆ | ಅನ್ನಭಾಗ್ಯ
ಬಡತನ ನಿರ್ಮೂಲನೆಗೆ | ಗೃಹಲಕ್ಷ್ಮಿ
ಅಂಧಕಾರ ನಿರ್ಮೂಲನೆಗೆ | ಗೃಹಜ್ಯೋತಿ
ನಿರುದ್ಯೋಗ ನಿರ್ಮೂಲನೆಗೆ | ಯುವನಿಧಿ


"ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಮೂಲಭೂತ ಕರ್ತವ್ಯ"

ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಹಿಂದುಳಿದ ವರ್ಗಗಳ ಮಾಲೀಕತ್ವ ಮತ್ತು ಸಂಪಾದಕತ್ವದ ಪತ್ರಿಕೆಗಳಿಗೆ ಪ್ರೋತ್ಸಾಹ ರೂಪದ ಜಾಹೀರಾತು

ಕರ್ನಾಟಕ ವಾರ್ತೆ

# ರಾಮಾಯಣದ ಋಷಿಕವಿ ವಾಲ್ಮೀಕಿ

ಆದಿಕವಿ, ರಾಮಾಯಣದ ಕರ್ತೃ ಎಂದರೆ ನಮಗೆ ತಕ್ಷಣಕ್ಕೆ ನೆನಪಾಗೊ ಹೆಸರೇ ವಾಲ್ಮೀಕಿ. ಅದಮ್ಯವಾದ,ಅನನ್ಯವಾದ ಸದಾ ಸದ್ವಿಚಾರಗಳನ್ನು ಪ್ರಸ್ತುತ ಭಾರತಾಂಬೆಯ ಮಕ್ಕಳಾದ ನಾವು ನೀವೆಲ್ಲ ಆಚರಿಸಿ, ಅನುಸರಿಸಿಕೊಂಡು ಬರುವುದರ ಹಿಂದೆ ರಾಮಾಯಣದಂತಹ ಕೃತಿಯ ಪ್ರಭಾವ ಎಷ್ಟಿದೆ ಎಂಬುದರ ಅರಿವು ನಮಗೆ ಎಷ್ಟೋ ಬಾರಿ ಬಾರದೇ ಹೋಗಿರುವುದು ತುಂಬಾ ವಿಪರ್ಯಾಸವೇ ಸರಿ.!



'ಕ್ರೂರತನಹೊಂದಿರುವವ್ಯಕ್ತಿಯನ್ನುಋಷಿಕವಿ'ಯನ್ನಾಗಿಸಿದ ಶಕ್ತಿ ಈ ಭರತ ಮಣ್ಣಿಗಿದೆ. ಇಂತಹ ಮಣ್ಣಲ್ಲಿ ಜನಿಸಿದ ನಾವೇ ಧನ್ಯರು ಎಂದರೆ ತಪ್ಪಾಗಲಾರದು. ವಾಲ್ಮೀಕಿ ಅವರು ಒಬ್ಬ ಋಷಿ ಹಾಗೂ ಸಂಸ್ಕೃತ ಕವಿ. ಮೊದಲ ಕಾವ್ಯ ರಚಿಸಿದ ಕಾರಣ ವಾಲ್ಮೀಕಿಯವರನ್ನು ಆದಿಕವಿ ಎಂದು ಕರೆಯಲಾಗಿದೆ. ರತ್ನಾಕರ ಎಂಬ ಮೂಲನಾಮವನ್ನು ಹೊಂದಿದ್ದ ವಾಲ್ಮೀಕಿಯ ಜೀವನದ ಬಗ್ಗೆ ಅನೇಕ ದಂತ ಕಥೆಗಳಿವೆ. ಅದರಲ್ಲಿ ಒಂದು ಕಥೆಯ ಪ್ರಕಾರ; ವಾಲ್ಮೀಕಿ ಋಷಿಯಾಗುವ ಮೊದಲು ಒಬ್ಬ ಬೇಡನಾಗಿದ್ದ. ಮುಂದೆ ನಾರದರ ಉಪದೇಶದಿಂದ ರತ್ನಾಕರನಿಗೆ ಜ್ಞಾನೋದಯವಾಯಿತು ಎಂದು ಹೇಳಲಾಗುತ್ತದೆ.

ವಾಲ್ಮೀಕಿ ಅವರು ಪರಮಾತ್ಮಶ್ರೀರಾಮನನ್ನು ಕುರಿತು ಬಹಳ ವರ್ಷಗಳ ಕಾಲ ತಪಸ್ಸು ಮಾಡುತ್ತಿದ್ದಾಗ ಅವರ ಸುತ್ತ ಹುತ್ತ ಬೆಳೆದಿತ್ತು. ಸಂಸ್ಕೃತದಲ್ಲಿ ಹುತ್ತಕ್ಕೆ ವಲ್ಮೀಕ ಎಂದು ಕರೆಯುವರು. ಆ ವಲ್ಮೀಕವನ್ನು ಭೇದಿಸಿಕೊಂಡು ಹೊರಗೆ ಬಂದಿದ್ದರಿಂದ ವಾಲ್ಮೀಕಿ ಎಂಬ ಹೆಸರು ಬಂದಿತು.

ಸುತ್ತಲೂ ಬೆಟ್ಟಗಳು, ಹಚ್ಚಹಸಿರಿನ ವಾತಾವರಣ ಆಗತಾನೇ ಆಗಸದಿಂದ ಇಳೆಗೆ ನೂಲೊಂದು ತಾಗುವಂತೆ ಶ್ವೇತ ಮಂಜಿನ ನಡುವೆ ಸೂರ್ಯರಶ್ಮಿಗಳು ತಾಗುತ್ತಿದ್ದವು. ಬೆಳಕು ಇಳೆಯ ಮುಸುಕು ಸರಿಸಿ ಧರೆಗೆ ಬೆಳಕಿನ ಸೀರೆಯುಡಿಸುತ್ತಿತ್ತು. ಮೌನವಾಗಿ ಬೀಸುವ ತಂಗಾಳಿ, ಆಗತಾನೆ ಮೈ ಬಿರಿದು ಹೂವಾಗಿ ಘಮಿಸುವ ಸುಮಗಳ ನಡುವೆ ತಾಮಸ ನದಿಯು ತಿಳಿ ಹಾಲನೊರೆಯಾಗಿ ಹರಿಯುತ್ತಿತ್ತು. ಹಕ್ಕಿಗಳ ನಾದ ಚಿಟ್ಟೆಗಳ ಪಿಸು ನುಡಿಗಳು ಬೆಟ್ಟಗಳಿಗೆ ತಾಗಿ ಮಾರ್ಧನಿಸುತ್ತಿದ್ದವು. ಇಂತಹ ರಮಣೀಯ ಕಾಲದಲ್ಲಿ ನದಿಯಲ್ಲಿ ವಾಲ್ಮೀಕಿ ಋಷಿಗಳು ಸ್ನಾನ ಮಾಡುತ್ತಾ ನದಿ ತೀರದಲ್ಲಿ ಸಂತೋಷವಾಗಿ ಹಾರಾಡುತ್ತಿದ್ದ ಕ್ರೌಂಚಪಕ್ಷಿಗಳ ಜೋಡಿಯನ್ನು ನೋಡುತ್ತಿದ್ದಾಗ ಇದ್ದಕ್ಕಿದ್ದಂತೆ ಬೇಡನೊಬ್ಬನು ಬಂದು ಬಾಣ ಹೂಡಿ ಅವುಗಳಲ್ಲಿ ಗಂಡು ಹಕ್ಕಿಯನ್ನು ಕೊಂದು ಬಿಡುತ್ತಾನೆ. ಅದರ ಸಂಗಾತಿ ಹೆಣ್ಣು ಹಕ್ಕಿಯು ಸಂಕಟದಿಂದ ಆರ್ತನಾದಿಸುತ್ತಾ, ಕೂಗಲಾರಂಭಿಸುತ್ತದೆ. ಈ ಹೃದಯ ವಿದ್ರಾವಕ ಸನ್ನಿವೇಶವನ್ನು ನೋಡಿ ಕರುಣೆ, ದುಃಖ, ಕೋಪದಿಂದ ಮಹರ್ಷಿಗಳು ಬೇಡನನ್ನು ಶಪಿಸುವಾಗ ಶೋಕದಿಂದ ಶ್ಲೋಕ ಒಂದು ಅವರ ಬಾಯಿಂದ ಉದ್ಗಾರವಾಗುತ್ತದೆ ಅದುವೇ

***ಮಾ ನಿಷಾದ ಪ್ರತಿಷ್ಠಾಂ ತ್ವಮಗಮಃ ಶಾಶ್ವತೀಃ ಸಮಾಃ ।***
***ಯತ್ಕ್ರೌಂಚಮಿಥುನಾದೇಕಮವಧೀಃ ಕಾಮಮೋಹಿತಮ್ ॥***
***ಈ ಶ್ಲೋಕದ ಅರ್ಥವೇನೆಂದರೆ,***
***ಅಕಾರಣವಾಗಿ ಹಕ್ಕಿಯನ್ನು ಕೊಂದ ಹೇ ಅನ್ಯಾಯಿ ।***
***ನಿನ್ನ ಪಾಪದ ಫಲವಾಗಿ ನೀ ಈ ಕೂಡಲೇ ಸಾಯಿ ॥***

ಇದು ರಾಮಾಯಣ ರಚನೆಗೆ ಸ್ಫೂರ್ತಿ ಹಾಗೂ ಪ್ರೇರಣೆಯಾದ ಘಟನೆ. ಈ ಶ್ಲೋಕವೇ ಮುಂದೆ ರಾಮಾಯಣ ಆರಂಭದ ಮಂಗಳ ಗೀತೆಯಾಗುತ್ತದೆ. ಆ ವೇಳೆಗೆ ಬ್ರಹ್ಮದೇವ ಮಹರ್ಷಿಗಳ ಆಶ್ರಮಕ್ಕೆ ಬಂದು ಇದೆ ಶ್ಲೋಕ ರೂಪದಲ್ಲಿ ರಾಮಾಯಣ ಕಾವ್ಯ ರಚಿಸಲು ಹೇಳುತ್ತಾರೆ. ನಾರದರು ತಮಗೆ ಸಂಗ್ರಹವಾಗಿ ಹೇಳಿದ್ದ ರಾಮನ ಕಥೆಯನ್ನು ವಾಲ್ಮೀಕಿ ಮಹರ್ಷಿಗಳು 24,000 ಶ್ಲೋಕಗಳನ್ನು ಒಳಗೊಂಡ ಮಹಾಕಾವ್ಯವಾಗಿ ಬರೆದರು.

ಈ ಸೃಷ್ಟಿ ಇರುವ ತನಕವೂ 'ರಾಮಾಯಣ'ಎಂಬ ಮಹಾಕಾವ್ಯವು ಲೋಕದಲ್ಲಿ ಪ್ರಸಿದ್ಧವಾಗಿರುತ್ತದೆ ಎಂಬ ಪ್ರಶಂಸೆಯ ಮಾತೊಂದಿದೆ. ಇದು ಏಕಕಾಲದಲ್ಲಿ ವಾಲ್ಮೀಕಿಯನ್ನು, ರಾಮಾಯಣವನ್ನು, ರಾಮನನ್ನು ನಿತ್ಯಸತ್ಯವನ್ನಾಗಿಸಿದೆ. ರಾಮಾಯಣ ಎಂದರೇನೆ ಮಾತಿನ ಮಹಿಮೆ. ರಾಮಾಯಣದ ಹುಟ್ಟಿನಿಂದ ಹಿಡಿದು ಅದರ ನಾಯಕನ ಹಿರಿಮೆಯವರೆಗೂ ಅಷ್ಟೇ ಏಕೆ, ರಾಮಾಯಣದುದ್ದಕ್ಕೂ ಮಾತಿನ ಶಕ್ತಿಯನ್ನು ಕಾಣುತ್ತೇವೆ. 'ನುಡಿದರೆ ಮುತ್ತಿನ ಹಾರದಂತಿರಬೇಕು' ಎಂಬಂತ ಮಾತುಗಳು ರಾಮಾಯಣದಂತಹ ಕೃತಿಯನ್ನು ಓದಿದಂತವರಿಗೆ ಆ ಸಾಲುಗಳ ಮಹತ್ವ ಅರಿವಾಗುವುದು.!

ಪ್ರತಿ ಪದಕ್ಕೊಂದು ಭಾವ, ಜೀವವನ್ನು ತುಂಬಿ, ಬದುಕನ್ನು ಜೀವ ಚೈತನ್ಯವಾಗಿಸುವ ಶಕ್ತಿ ಇರುವುದು ರಾಮಾಯಣದಂತಹ ಕೃತಿಗೆ; ವಾಲ್ಮೀಕಿ ಅವರ ಬಗ್ಗೆ ಹೆಚ್ಚಿನ ವಿವರವಿಲ್ಲದಿರಬಹುದು. ಆದರೆ, ಅದರ ಪ್ರತಿನುಡಿಗಳು ವಾಲ್ಮೀಕಿಯ ವ್ಯಕ್ತಿತ್ವವನ್ನು ಪ್ರತಿಬಿಂಬಿಸುತ್ತವೆ. ವೃದ್ಧ, ರೋಗಿ, ಸನ್ಯಾಸಿ, ಶವದಂತಹ ನಾಲ್ಕು ದೃಶ್ಯಗಳನ್ನು ನೋಡಿದ ಸಿದ್ಧಾರ್ಥನು ಬುದ್ಧನಾದಂತೆ, ಹಕ್ಕಿಯ ಆಕ್ರಂದನದಲ್ಲಿ ಅವರು ಇಡಿಯ ಜಗತ್ತಿನ ಅಳುವನ್ನು ಕಂಡರು. ಈ ವಿಶ್ವಾತ್ಮಭಾವದ ಕಾರಣದಿಂದಾಗಿಯೇ ಅವರ ಶೋಕವೇ ಶ್ಲೋಕವಾಯಿತು. ಈ ಸಹೃದಯತೆಯ ರಸಾಭಿವ್ಯಕ್ತಿಯಲ್ಲಿ ರಾಮ-ಸೀತೆಯರ ಕಥೆ ರಾಮಾಯಣವಾಯಿತು.

ಸಂಪರ್ಕಜಾಲದ ದೆಸೆಯಿಂದ ಇಂದು ಜಗತ್ತು ಭೌತಿಕವಾಗಿ ಪುಟ್ಟ ಗ್ರಾಮದಂತಾಗಿದ್ದರೂ ಬುದ್ಧಿ ಭಾವಗಳು ಮಾತ್ರ ವಿಭಿನ್ನ ಮತ್ತು ಪ್ರತ್ಯೇಕತೆಯ ಭಾವವೇ ತೀವ್ರವಾಗುತ್ತಿರುವ ಕಾಲವಿದು. ಸಂಪರ್ಕ ಸಾಧನಗಳ ಆರ್ಭಟವಿಲ್ಲದ ಕಾಲದಲ್ಲಿ 'ರಾಮ ತತ್ವ' ಎಂಬ ಧರ್ಮಸೇತು ದೇಶದ ಸಂಸ್ಕೃತಿಯನ್ನು ರೂಪಿಸಿತು, ಧರ್ಮದ ಸ್ವರೂಪವನ್ನು ಹಿಗ್ಗಿಸಿತು. ಮನುಷ್ಯ ಜೀವನದ ಆದರ್ಶಗಳನ್ನು ಬೆಳೆಸಿತು. ಜಾತಿ, ಮತ, ಭಾಷೆ, ಪ್ರಾಂತ್ಯಗಳ ಎಲ್ಲೆಯನ್ನು ಮೀರಿ ಎಲ್ಲರನ್ನೂ ರಾಮ ಭಾವದಲ್ಲಿ ಕೂಡಿಸಿತು.

ಧರ್ಮವನ್ನು, ಧಾರ್ಮಿಕತೆಯನ್ನು ನಮಗೆ ತಕ್ಕ ಹಾಗೆ ಅನುಕೂಲ ಸಿಂಧುವನ್ನಾಗಿಸಿಕೊಳ್ಳುವ ಪ್ರಸ್ತುತ ದಿನಮಾನಗಳಲ್ಲಿ ನಿಜವಾದ ಧರ್ಮ, ಶ್ರದ್ಧೆಯ ಆಕಾರವನ್ನು ಕರುಣಿಸಿದವರು ವಾಲ್ಮೀಕಿಗಳು. ಧರ್ಮ ಎನ್ನುವುದು ಸನಾತನವಾದುದು; ಅದು ನಮ್ಮ ಸ್ವಾರ್ಥ ಬುದ್ಧಿ, ಅನುಕೂಲ, ದೇಶ, ಕಾಲಗಳನ್ನು ಮೀರಿದ ಶಾಶ್ವತ ತತ್ವ ಎಂಬುದರ ಮೀಮಾಂಸೆಯನ್ನು ರಾಮಾಯಣದ ಆರಂಭದಿಂದ ಕೊನೆಯ ತನಕ ಅವರು ನಿರೂಪಿಸಿದ್ದಾರೆ.

ನಿಜವಾದ ಧಾರ್ಮಿಕ ಹೇಗಿರುತ್ತಾನೆ ಎಂಬುದಕ್ಕೆ ಒಂದು ಉದಾಹರಣೆಯನ್ನು ನೋಡಬಹುದು. ರಾಮನು ಪಟ್ಟಾಭಿಷೇಕಕ್ಕೆ ಸಿದ್ದನಾಗುತ್ತಿದ್ದಾನೆ ಅದರೆ ಮುಂದೆ ಸ್ವಲ್ಪವೇ ಸಮಯದ ಅಂತರದಲ್ಲಿ ಕಾಡಿಗೆ ಹೋಗಲು ಅವನು ಸಿದ್ದನಾಗಬೇಕಾಗುತ್ತದೆ. ಆಗ ರಾಮನ ಮುಖ ಹೇಗಿತ್ತು ಎಂಬುದನ್ನು ವಾಲ್ಮೀಕಿಗಳು ವರ್ಣಿಸುತ್ತಾರೆ. ಅವನು 'ಪಟ್ಟಾಭಿಷೇಕಕ್ಕೆ ಸಿದ್ಧವಾಗುತ್ತಿದ್ದಾಗ ಅವನ ಮುಖ ಹೇಗಿದ್ದಿತ್ತೋ ಈಗ ಕಾಡಿಗೆ ಹೋಗಲು ಸಿದ್ಧವಾಗ ಬೇಕಾದರೂ ಹಾಗೆಯೇ ಇದ್ದಿತು' ಸ್ವಲ್ಪವೂ ವ್ಯತ್ಯಾಸ ಇರಲಿಲ್ಲ. ಧರ್ಮದಲ್ಲಿ ನಿರತನಾದವನಿಗೆ ನಾಡಾದರೂ ಒಂದೇ, ಕಾಡಾದರೂ ಒಂದೇ. ಅವನಿಗೆ ಧರ್ಮ ಮಾರ್ಗ ಮುಖ್ಯವೇ ಹೊರತು ಸಿಂಹಾಸನ-ವನವಾಸಗಳು ಅಲ್ಲ ಎಂಬುದನ್ನು ತುಂಬಾ ಅದ್ಭುತವಾಗಿ ವಾಲ್ಮೀಕಿಗಳು ಸೂಚಿಸಿದ್ದಾರೆ.

ಅಧಿಕಾರದ ದುರಾಸೆ, ಸಂಪತ್ತಿನ ವ್ಯಾಮೋಹ, ಅಧಿಕಾರವಿದ್ದರೆ ಏನು ಬೇಕಾದರೂ ಮಾಡಿ ದಕ್ಕಿಸಿಕೊಳ್ಳಬಹುದು, ಅರ್ಹತೆ ಇಲ್ಲದಿದ್ದರೂ ತಮ್ಮದಲ್ಲದ ವಸ್ತು, ಆಸ್ತಿ, ಅಧಿಕಾರ ಅಂತಸ್ತಿಗೆ ಹಪಹಪಿಸುವ ವ್ಯಕ್ತಿಗಳು ಕಾನೂನುಗಳಿದ್ದರೂ, ತಮಗೆ ಬೇಕಾದ ರೀತಿಯಲ್ಲಿ ತಿದ್ದಿಕೊಂಡು ನಾನೇ, ನನ್ನಿಂದನೇ ಎಲ್ಲ ಎಂದು ಬೊಬ್ಬೆ ಕೊಚ್ಚಿಕೊಳ್ಳುವ ಪ್ರಸ್ತುತ ದಿನಮಾನಗಳಲ್ಲಿ ಮಾನವೀಯತೆಯ ಮುಖವಾಡ ಹಾಕಿಕೊಂಡು ಅಮಾನವೀಯವಾಗಿ ನಡೆದುಕೊಳ್ಳುವ ನಾಯಕರ ನಡುವೆ ಅಧರ್ಮ ಮಾರ್ಗದಿಂದ ನಾನು ರಾಜ್ಯವನ್ನು ದಕ್ಕಿಸಿಕೊಳ್ಳಲಾರೆ ಎಂದು ರಾಮ ನೇರವಾಗಿಯೇ ಘೋಷಿಸುತ್ತಾನೆ. ನಮಗಿಂದು ರಾಮಾಯಣ ಮತ್ತು ವಾಲ್ಮೀಕಿ ಮಹರ್ಷಿ ಪ್ರಸ್ತುತ ಎನಿಸುವುದೇ ಇಂತಹ ಕಾಣ್ಕೆಗಾಗಿ. 'ವ್ಯಕ್ತಿ ಶಾಶ್ವತವಲ್ಲ ವಿಚಾರಗಳು ಶಾಶ್ವತ ಎಂಬಂತೆ' ಜಾತಿ, ಮತ, ಧರ್ಮದ ಹೆಸರಿನಲ್ಲಿ ಮಹಾನ್ ಪುರುಷರನ್ನು ಕೇವಲ ಜಾತಿ, ಧರ್ಮಕ್ಕೆ ಸೀಮಿತಗೊಳಿಸಿ ಜಯಂತಿಯ ಹೆಸರಿನಲ್ಲಿ ಅವರನ್ನು ಜೀವಂತವಾಗಿಡುವ ಕೆಲಸ ಮಾಡುತ್ತಿರುವುದು ವಿಪರ್ಯಾಸವೇ ಸರಿ.! ಅವರು ಯಾರೂ ವ್ಯಕ್ತಿ ಪೂಜೆಗೆ ಪ್ರೇರೇಪಿಸಿದವರಲ್ಲ. ಅವರ ವಿಚಾರಗಳನ್ನು ನಾವು, ನೀವೆಲ್ಲ ಹೃದಯ ಮಂದಿರದಲ್ಲಿ ಜೀವಂತವಾಗಿ ಸ್ಥಾಪಿಸಿಕೊಳ್ಳುವ ಪ್ರಯತ್ನ ಮಾಡಿದರೆ ಅಂತಹ ಮಹಾನ್ ವ್ಯಕ್ತಿಗಳು ನಮ್ಮೊಳಗೂ ಗಟ್ಟಿ ನೆಲೆಯಾಗಿ ನಿಲ್ಲಬಹುದೇನೋ, ನಮ್ಮೊಳಗೂ ಕ್ರೂರ ರತ್ನಾಕರನೊಬ್ಬ ಮರಣಿಸಿ ಮಹರ್ಷಿ ವಾಲ್ಮೀಕಿಯೊಬ್ಬ ಜನಿಸಿ ಆದರ್ಶಪುರುಷ ರಾಮನ ಆದರ್ಶಗಳನ್ನು, ಮೌಲ್ಯಗಳನ್ನು, ತ್ಯಾಗ, ಪ್ರೀತಿ, ಪ್ರಜಾವಾತ್ಸಲ್ಯ, ಸಹೋದರತೆ, ಪಿತೃವಾಕ್ಯ ಪರಿಪಾಲನೆ ಸರ್ವರಿಗೂ ಏಕರೀತಿಯ ನ್ಯಾಯ ಒದಗಿಸಿ ರಾಮರಾಜ್ಯ ಎಂಬ ಹೊಸ ಪರಿಕಲ್ಪನೆಯನ್ನು ಅಚ್ಚಳಿಯದೆ ರಾಮಾಯಣದಂತಹ ಗ್ರಂಥದ ಮೂಲಕ ಜೀವಂತವಾಗಿರಿಸಿ ಜೀವಿಸಬಹುದೇನೋ.? ಆಗ ಹಾರ ತುರಾಯಿಗಳ ನೆಪದಲ್ಲಿ ಅವರನ್ನು ನೆನಪುಮಾಡಿ ಕೊಳ್ಳುವ ನೆಪ ಸಂಪ್ರದಾಯದ ಅವಶ್ಯಕತೆ ಇರುವುದಿಲ್ಲ. ಪ್ರಿಯವಾದ ಮಾತುಗಳನ್ನು ಆಡುವವರು ಯಾವಾಗಲೂ ದೊರೆಯುತ್ತಾರೆ. ಆದರೆ 'ಅಪ್ರಿಯವಾದರೂ ಹಿತವಾದ ಮಾತುಗಳನ್ನು ಹೇಳುವವರು ಕೇಳುವವರು ಸಿಗುವುದು ಕಷ್ಟ' ಇದು ರಾಮಾಯಣದ್ದೇ ಮಾತು. ಆದರೆ ವಾಲ್ಮೀಕಿಗಳು ನಮಗೆ ಹಿತವಾದ ಮಾತುಗಳನ್ನು ಪ್ರಿಯವಾದ ಮಾತುಗಳ ಮೂಲಕವೇ ಹೇಳಿ ನಮ್ಮ ಪಾಲಿಗೆ ರಸಕವಿಯು, ಋಷಿಕವಿಯು ಆಗಿದ್ದಾರೆ. ಅವರ ಮಾತುಗಳನ್ನು ನಾವು ಕೇಳಬೇಕು ಅಷ್ಟೇ.!



**-ಬಸವರಾಜ ಕರುವಿನ,** ಬಸವನಾಳು.

# ಬಂದ್‌ಗೆ ಮಿಶ್ರ ಪ್ರತಿಕ್ರಿಯೆ

**(1ನೇ ಪುಟದಿಂದ)** ಕೂಡ ಎಂದಿನಂತೆ ಇತ್ತು.

ನಗರದ ಕೆಲವು ಕಾಲೇಜುಗಳು ರಜೆ ಘೋಷಿಸಿದ್ದವು. ಮತ್ತೆ ಕೆಲವು ಕಾಲೇಜುಗಳಲ್ಲಿ ಎಂದಿನಂತೆ ತರಗತಿಗಳು ನಡೆದವು. ವಿದ್ಯಾರ್ಥಿಗಳ ಹಾಜರಾತಿ ಮಾತ್ರ ಕಡಿಮೆ ಇರುವುದು ಕಂಡುಬಂದಿತು.

**ರೈಲ್ವೆ ನಿಲ್ದಾಣದ ಬಳಿ ಬಹಿರಂಗ ಸಭೆ:** ಗಾಂಧಿ ವೃತ್ತದಿಂದ ಪ್ರತಿಭಟನಾ ಮೆರವಣಿಗೆಯಲ್ಲಿ ಬಂದ ಪ್ರತಿಭಟನಾಕಾರರು ರೈಲ್ವೆ ನಿಲ್ದಾಣದ ಬಸ್ ತಂಗುದಾಣದ ಬಳಿ ನಡೆದ ಬಹಿರಂಗ ಸಭೆಯಲ್ಲಿ ವಿವಿಧ ಸಂಘಟನೆಗಳ ಮುಖಂಡರು ಮಾತನಾಡಿದರು.

ಅಭಯಾ ದಿವಾಕರ್, ತೇಜಸ್ವಿ ಪಟೇಲ್, ಹಿರೇಮಠ್, ಹೆಚ್.ಜಿ. ಉಮೇಶ್, ಬಲ್ಲೂರು ರವಿಕುಮಾರ್, ಚಿನ್ನಸಮುದ್ರ ಶೇಖರನಾಯ್ಕ, ಐಗೂರು ಸುರೇಶ್, ಮಲ್ಲಶೆಟ್ಟಿಹಳ್ಳಿ ಚನ್ನಬಸಪ್ಪ, ಗುಮ್ಮನೂರು ಬಸವರಾಜ್, ಇಸ್ಮಾಯಿಲ್, ರಾಜೇಂದ್ರ ಬಂಗೇರ ಸೇರಿದಂತೆ ಅನೇಕರು ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದರು.

ಸ್ಥಳಕ್ಕೆ ಆಗಮಿಸಿದ ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್ ಮನವಿ ಪತ್ರ ಸ್ವೀಕರಿಸಿದರು.

ಪ್ರತಿಭಟನೆಯಲ್ಲಿ ಆವರಗೆರೆ ಚಂದ್ರು, ರಂಗನಾಥ್, ನಿವೃತ್ತ ಪ್ರಾಚಾರ್ಯ ಕೆ.ಎಸ್. ಈಶ್ವರಪ್ಪ, ಕುಕ್ಕುವಾಡ ಮಂಜುನಾಥ್, ಕೈದಾಳ್ ಮಂಜುನಾಥ್, ಪೂಜಾ ನಂದಿಹಳ್ಳಿ, ಸೌಮ್ಯ, ಬನಶ್ರೀ, ಸತೀಶ ಅರವಿಂದ್, ಭಾರತಿ, ಲೀಲಾ ಮಾಗಾನಹಳ್ಳಿ, ಅವಿನಾಶ್ (ಅಭಿ), ಶಶಿಕಲಾ, ಅನಿಲ್, ಸುನಿಲ್, ಅಖಿಲೇಶ್, ಅಭಿಷೇಕ್, ಪೀರ್‌ಸಾಬ್, ವೆಂಕಟೇಶ್, ಮೇಘನಾ, ಕಾವ್ಯ, ಸುಮನ್ ಮತ್ತಿತರರು ಭಾಗವಹಿಸಿದ್ದರು.

**ಮಳೆಯಲ್ಲಿಯೇ ಮಾನವ ಸರಪಳಿ**
**ಗಾಂಧಿ ವೃತ್ತದಲ್ಲಿ ಸೇರಿದ್ದ ಪ್ರತಿಭಟನಾಕಾರರು ಸುರಿಯುವ ಮಳೆಯಲ್ಲಿಯೇ 'ಮಾನವ ಸರಪಳಿ' ರಚಿಸಿ, ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.**

**ವಿದ್ಯಾರ್ಥಿಗಳಿಗೆ ಹೊರೆ ಮಾಡುವ ಸರ್ಕಾರದ ತೀರ್ಮಾನ ತಪ್ಪು. ಯುಬಿಡಿಟಿ ರಾಜ್ಯದಲ್ಲೇ ಉತ್ತಮ ಕಾಲೇಜೆಂದು ಹೆಸರು ಪಡೆದಿದೆ. ಇಲ್ಲಿ ವ್ಯಾಸಂಗ ಪೂರೈಸಿ ಹೋದ ಅನೇಕ ಬಡ ವಿದ್ಯಾರ್ಥಿಗಳಿಗೆ ಉದ್ಯೋಗಗಳು ಲಭಿಸಿವೆ. ಇಂತಹ ಕಾಲೇಜಿನಲ್ಲಿ ಪೇಮೆಂಟ್ ಸೀಟು ಮಾಡಿರುವುದು ಸರಿಯಲ್ಲ. ಈ ನಿರ್ಧಾರ ವಾಪಾಸ್ ಪಡೆಯುವವರೆಗೂ ವಿದ್ಯಾರ್ಥಿಗಳು ಹೋರಾಡಬೇಕು. ಅದಕ್ಕೆ ನಮ್ಮ ಬೆಂಬಲವಿದೆ.**
**- ತೇಜಸ್ವಿ ಪಟೇಲ್ ಕಾರಿಗನೂರು.**

**ಸರ್ಕಾರ ಒಂದಾದ ನಂತರ ಒಂದರಂತೆ ಉನ್ನತ ಶಿಕ್ಷಣದ ಮೇಲೆ ನಿರಂತರ ದಾಳಿ ನಡೆಸುತ್ತಿದೆ. ಎಲ್ಲಾ ಸರ್ಕಾರಗಳು ಶಿಕ್ಷಣ ವ್ಯವಸ್ಥೆಯನ್ನು ಕಾರ್ಪೊರೇಟೀಕರಣ ಮಾಡಲು ಹೊರಟಿವೆ. ಇದು ಕೇವಲ ಯುಬಿಡಿಟಿ ಕಾಲೇಜಿನಗೆ ಸೀಮಿತವಲ್ಲ. ಮುಂದೊಂದು ದಿನ ಎಲ್ಲಾ ಸರ್ಕಾರಿ ಶಿಕ್ಷಣ ಸಂಸ್ಥೆಗಳಿಗೆ ಇಂಥದೇ ಪರಿಸ್ಥಿತಿ ಎದುರಾಗುವುದರಲ್ಲಿ ಸಂಶಯವಿಲ್ಲ. ಇದು ಶಿಕ್ಷಣಕ್ಕಾಗಿ ಹೋರಾಟ ನಡೆಸಿದ ಎಲ್ಲಾ ಮಹಾನ್ ವ್ಯಕ್ತಿಗಳ ಆಶಯಕ್ಕೆ ವಿರುದ್ಧವಾಗಿದೆ.**
**ಸರ್ಕಾರ ಶೇ. 50 ರ ಪೇಮೆಂಟ್ ಸೀಟುಗಳನ್ನು ರದ್ದುಗೊಳಿಸದಿದ್ದಲ್ಲಿ ರಾಜ್ಯದ ವಿದ್ಯಾರ್ಥಿಗಳು ಬೃಹತ್ ಚಳವಳಿ ನಡೆಸಲು ಚಿಂತನೆ.**
**- ಅಭಯಾ ದಿವಾಕರ್, ಎಐಡಿಎಸ್‌ಓ ರಾಜ್ಯ ಉಪಾಧ್ಯಕ್ಷ**

**ರಾಜ್ಯ ಸರ್ಕಾರಕ್ಕೆ ಬಡವರ ಬಗ್ಗೆ ಕಿಂಚಿತ್ತೂ ಕಾಳಜಿ ಇಲ್ಲ. ಈ ಕಾರಣಕ್ಕಾಗಿಯೇ ಬಡವರ ಮಕ್ಕಳ ಉನ್ನತ ಶಿಕ್ಷಣಕ್ಕೆ ಮೀಸಲಾಗಿದ್ದ ಯುಬಿಡಿಟಿ ಕಾಲೇಜಿನಲ್ಲಿ ಪೇಮೆಂಟ್ ಸೀಟ್ ಪದ್ಧತಿ ಜಾರಿಗೆ ತಂದಿರುವುದು ಸರಿಯಲ್ಲ. ಗ್ಯಾರಂಟಿ ಯೋಜನೆಗಳಿಗೆ ಹಣ ಹೊಂದಿಸಲು ಈ ರೀತಿ ನಿರ್ಧಾರಗಳನ್ನು ತೆಗೆದುಕೊಳ್ಳುವುದು ತಪ್ಪು.**
**ಹೆಚ್.ಜಿ. ಉಮೇಶ್ ಆವರಗೆರೆ**

# ವಾಲ್ಮೀಕಿ ಜಯಂತಿ: ಅದ್ದೂರಿ ಬೈಕ್ ರ್‍ಯಾಲಿ

**(1ನೇ ಪುಟದಿಂದ)** ಪ್ರಸನ್ನಾನಂದ ಪುರಿ ಶ್ರೀಗಳು, ಮಹತ್ತರ ಸಾಧನೆಗೈದ ಆದಿಕವಿ ವಾಲ್ಮೀಕಿ ಮುನಿಗಳು ತಮ್ಮ ಆತ್ಮ ಕಲ್ಯಾಣ ಮಾಡಿಕೊಳ್ಳುವ ಜತೆಗೆ ಲೋಕ ಕಲ್ಯಾಣಾರ್ಥಕವಾಗಿ ರಾಮಾಯಣದಂತಹ ಮಹಾನ್ ಕಾವ್ಯ ರಚಿಸಿದ್ದಾರೆ ಎಂದು ಸ್ಮರಿಸಿದರು.

ರಾಜ್ಯದಲ್ಲಿ ನಾಯಕ ಮತ್ತು ತಳವಾರರಲ್ಲದ ಅನ್ಯ ಜನಾಂಗದವರು ನಮ್ಮ ಸಮುದಾಯದ ಹೆಸರಿನಲ್ಲಿ ಸುಳ್ಳು ಜಾತಿ ಪ್ರಮಾಣ ಪತ್ರ ತೆಗೆದುಕೊಳ್ಳುತ್ತಿದ್ದು, ಈ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಸರ್ಕಾರದಿಂದ 2024ನೇ ಶೈಕ್ಷಣಿಕ ಸಾಲಿನ ನಮ್ಮ ಸಮುದಾಯದ ಮಕ್ಕಳಿಗೆ ವಿದ್ಯಾರ್ಥಿ ವೇತನ, ಪ್ರೈಜ್ ಮನಿ ಮತ್ತು ಗಂಗಾ ಕಲ್ಯಾಣ ಯೋಜನೆ ಸೇರಿದಂತೆ ಸಬ್ಸಿಡಿಗಳು ಲಭಿಸಿಲ್ಲ ಎಂದು ದೂರಿದರು.

ಮಾಜಿ ಶಾಸಕ ಎಸ್.ವಿ. ರಾಮಚಂದ್ರ ಮಾತನಾಡಿ, ವಾಲ್ಮೀಕಿ ಸಮಾಜದ ಒಗ್ಗಟ್ಟು ಪ್ರದರ್ಶಿಸಲು ವಾಲ್ಮೀಕಿ ಜಯಂತಿಯನ್ನು ಅದ್ದೂರಿಯಾಗಿ ಮಾಡುತ್ತಾ ಬಂದಿದ್ದೇವೆ ಎಂದರು.

ವಾಲ್ಮೀಕಿ ಮಹರ್ಷಿಗಳು ಕೇವಲ ನಾಯಕ ಸಮಾಜಕ್ಕೆ ಸೀಮಿತವಾಗದೇ ಪ್ರಪಂಚಕ್ಕೆ ಮಾರ್ಗದರ್ಶಿಗಳಾಗಿದ್ದಾರೆ ಎಂದು ಹೇಳಿದರು.

ವಿವಿಧ ಹಳ್ಳಿಗಳಿಂದ ಆಗಮಿಸಿದ ಯುವಕರು ರ್‍ಯಾಲಿಯಲ್ಲಿ ಪಾಲ್ಗೊಂಡಿದ್ದರು. ಬೃಹತ್ ಕೇಸರಿ ಮತ್ತು ಬಿಳಿ ಬಾವುಟಗಳು ರ್‍ಯಾಲಿಯಲ್ಲಿ ರಾರಾಜಿಸಿದವು.

ಸಮಾಜದ ಮುಖಂಡರುಗಳಾದ ಆರ್.ಎಸ್. ಶೇಖರಪ್ಪ, ಶ್ರೀನಿವಾಸ್ ದಾಸಕರಿಯಪ್ಪ, ಮಾಜಿ ಮೇಯರ್ ವಿನಾಯಕ, ಜಿಲ್ಲಾಧ್ಯಕ್ಷ ವೀರಣ್ಣ, ಯುವ ಘಟಕದ ಅಧ್ಯಕ್ಷ ಬಸವರಾಜ್, ಹದಡಿ ಹಾಲಪ್ಪ, ಅಂಜಿನಪ್ಪ, ಫಣಿಯಾಪುರ ಲಿಂಗರಾಜ್, ಪ್ರವೀಣ್, ಗೋಶಾಲೆ ಸುರೇಶ್, ಪರಶುರಾಮ್ ಸೇರಿದಂತೆ ಸಮಾಜದ ಮುಖಂಡರು ರ್‍ಯಾಲಿಯಲ್ಲಿ ಭಾಗವಹಿಸಿದ್ದರು.

**ಸರ್ಕಾರವು ಮಹರ್ಷಿಗಳ ಜಯಂತ್ಯುತ್ಸವವನ್ನು ಸಾಂಕೇತಿಕವಾಗಿ ಮಾಡಿದರೆ ಸಾಲದು, ಈ ಸಮುದಾಯದ ಸಾಂವಿಧಾನಿಕ ಹಕ್ಕುಗಳನ್ನು ಸರಿಪಡಿಸುವ ಜತೆಗೆ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದ ಅವ್ಯವಹಾರ ಸರಿಪಡಿಸಬೇಕು.**
**- ಪ್ರಸನ್ನಾನಂದಪುರಿ ಸ್ವಾಮೀಜಿ**

## ಸಾಮಾಜಿಕ ಕಾರ್ಯಕರ್ತರಿಗೆ ರಾಜ್ಯೋತ್ಸವ ಪ್ರಶಸ್ತಿ ನೀಡಿ

ದಾವಣಗೆರೆ, ಅ.16- ಎಂಎಸ್‌ಡಬ್ಲ್ಯೂ ಸ್ನಾತಕೋತ್ತರ ಪದವಿ ಪೂರೈಸಿದ ವೃತ್ತಿಪರ ಸಾಮಾಜಿಕ ಕಾರ್ಯಕರ್ತರು, ನೌಕರರಿಗೆ ಜಿಲ್ಲಾಡಳಿತ ಹಾಗೂ ನಗರ ಪಾಲಿಕೆ ವತಿಯಿಂದ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ನೀಡುವಂತೆ ಪ್ರೊಫೆಷನಲ್ ಸೋಷಿಯಲ್ ವರ್ಕರ್ಸ್ ವೆಲ್‌ಫೇರ್ ಅಸೋಸಿಯೇಷನ್ ಅಧ್ಯಕ್ಷ ಸಂತೊಷ್ ಕುಮಾರ್ ಸರ್ಕಾರಕ್ಕೆ ಒತ್ತಾಯಿಸಿದ್ದಾರೆ.

ಸಮಾಜಮುಖಿ ಕೆಲಸದಲ್ಲಿ ಎಲೆ ಮರೆ ಕಾಯಿ ಯಂತೆ ನಿತ್ಯವೂ ಕ್ಷಯರೋಗ ವಿಭಾಗ, ಮಾನಸಿಕ ಆರೋಗ್ಯ, ಕುಷ್ಠರೋಗ, ಮಹಿಳಾ ಮತ್ತು ಮಕ್ಕಳ ಸೇವಾ ಕ್ಷೇತ್ರ, ಆಪ್ತಸಮಾಲೋಚನಾ ಮತ್ತು ಹೆಚ್.ಐ.ವಿ. ತಡೆಗಟ್ಟುವ ಕ್ಷೇತ್ರ ಸೇರಿದಂತೆ ಇನ್ನಿತರೆ ಕ್ಷೇತ್ರಗಳ ಪ್ರಾಮಾಣಿಕವಾಗಿ ಕಾರ್ಯ ನಿರ್ವಹಿಸುವವರನ್ನು ಗುರುತಿಸುವಂತೆ ಮನವಿ ಮಾಡಿದ್ದಾರೆ.

ಬರುವ ನ.1ರಂದು ಕೊಡುವ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿಯನ್ನು ಪ್ರತಿ ಜಿಲ್ಲೆಯ ಕನಿಷ್ಠ ಇಬ್ಬರಿಗೆ ಪ್ರಶಸ್ತಿ ನೀಡುವಂತೆ ಸಂಬಂಧಿಸಿದ ಅಧಿಕಾರಿಗಳು ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ಆಡಳಿತಾಧಿಕಾರಿಗಳಿಗೆ ಆದೇಶಿಸುವಂತೆ ಆಗ್ರಹಿಸಿದ್ದಾರೆ.

## ನಗರದ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಇಂದು ಸೀಗೆ ಹುಣ್ಣಿಮೆ



ಡಿ. ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್‌ನಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಸೀಗೆ ಹುಣ್ಣಿಮೆ ಪ್ರಯುಕ್ತ ಇಂದು ನವಗ್ರಹ ಹೋಮ, ಶ್ರೀ ಸತ್ಯ ನಾರಾಯಣ ಸ್ವಾಮಿ ಪೂಜಾ ಕಥಾ, ಪ್ರಧಾನ ದೇವತೆ ಶ್ರೀ ಮಾತಾ ಅನ್ನಪೂರ್ಣೇಶ್ವರಿಗೆ ಮಂಗಳಾರತಿ ಮತ್ತು ತೀರ್ಥ ಪ್ರಸಾದ ವಿನಿಯೋಗ ನಡೆಯಲಿದೆ ಎಂದು ದೇವಸ್ಥಾನ ಸಮಿತಿ ಗೌರವ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ.

ಶ್ರೀಮತಿ ಅರ್ಚನ ಮತ್ತು ಶ್ರೀ ತೇಜಸ್ ಹಾಗೂ ಸಹ ಕುಟುಂಬದವರು ಸೇವಾಕರ್ತರಾಗಿದ್ದಾರೆ ಎಂದು ದೇವ ಸ್ಥಾನ ಸಮಿತಿ ಅಧ್ಯಕ್ಷ ಪ್ರಕಾಶ್ ಪಾಟೀಲ್ ವಿವರಿಸಿದ್ದಾರೆ.

# ಗಣ್ಯರ ಭದ್ರತೆಯಿಂದ ಎನ್‌ಎಸ್‌ಜಿ ವಾಪಸ್

ನವದೆಹಲಿ, ಅ. 16 - ಉಗ್ರವಾದಿ ನಿಗ್ರಹ ದಳವಾದ ಎನ್‌ಎಸ್‌ಜಿ ಕಮಾಂಡೋ ಪಡೆಯನ್ನು ಗಣ್ಯರ ಭದ್ರತಾ ಕರ್ತವ್ಯದಿಂದ ಸಂಪೂರ್ಣ ವಾಪಸ್ ಪಡೆಯಲು ಕೇಂದ್ರ ಸರ್ಕಾರ ಆದೇಶಿಸಿದೆ. ಗಣ್ಯರ ರಕ್ಷಣಾ ಹೊಣೆಯನ್ನು ಮುಂದಿನ ತಿಂಗಳಲ್ಲಿ ಸಿ.ಆರ್.ಪಿ.ಎಫ್.ಗೆ ವಹಿಸ ಲಾಗುವುದು ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಇದುವರೆಗೂ ಸಂಸತ್ತಿನ ಭದ್ರತಾ ಕರ್ತವ್ಯ ನಿರ್ವಹಿಸುತ್ತಿದ್ದ ವಿಶೇಷ ತರಬೇತಿ ಹೊಂದಿದ ಸಿಬ್ಬಂದಿಯನ್ನು ಸಿ.ಆರ್. ಪಿ.ಎಫ್.ನ ಗಣ್ಯರ ರಕ್ಷಣಾ ವಿಭಾಗಕ್ಕೆ ಸೇರ್ಪಡೆ ಮಾಡಲಾಗುವುದು.

ಝಡ್ ಪ್ಲಸ್ ಭದ್ರತೆ ಪಡೆದಿರುವ ಒಂಭತ್ತು ಗಣ್ಯರಿಗೆ ಎನ್.ಎಸ್.ಜಿ. ಬ್ಲಾಕ್ ಕ್ಯಾಟ್ ಕಮಾಂಡೋಗಳಿಂದ ಭದ್ರತೆ ನೀಡಲಾಗುತ್ತಿತ್ತು. ಅವರು ಇನ್ನು ಮುಂದೆ ಸಿ.ಆರ್.ಪಿ.ಎಫ್. ಭದ್ರತೆ ಪಡೆಯಲಿದ್ದಾರೆ ಎಂದು ಮೂಲಗಳು ತಿಳಿಸಿವೆ. ಒಂದು ತಿಂಗಳಲ್ಲಿ ಈ ಬದಲಾವಣೆ ಜಾರಿಗೆ ಬರಲಿದೆ. ಸರ್ಕಾರದ ಈ ಕ್ರಮದಿಂದ 450 ಬ್ಲಾಕ್ ಕ್ಯಾಟ್ ಕಮಾಂಡೋಗಳು ಭದ್ರತೆಯ ಹೊಣೆಗಾರಿಕೆಯಿಂದ ಮುಕ್ತರಾಗಲಿದ್ದಾರೆ ಎಂದು ಮೂಲಗಳು ಹೇಳಿವೆ.

ಉಗ್ರವಾದ ವಿರೋಧಿ ಕಾರ್ಯಾಚರಣೆ ಹಾಗೂ ಹೈಜಾಕ್ ವಿರೋಧಿ ಕಾರ್ಯಾಚರಣೆಗಳಿಗಾಗಿ ಎನ್.ಎಸ್.ಜಿ. ರೂಪಿಸಲಾಗಿತ್ತು. ಗಣ್ಯರ ಭದ್ರತೆಯ ಹೊಣೆಯನ್ನು ಈ ಪಡೆಗಳಿಗೆ ವಹಿಸಿರುವುದರಿಂದ ಅವರಿಗೆ ಹೊರೆಯಾಗುತ್ತಿದೆ ಎಂದು ಕೇಂದ್ರ ಸರ್ಕಾರ ಈ ಹಿಂದೆ ತಿಳಿಸಿತ್ತು.

## ರಾಣೇಬೆನ್ನೂರಿನಲ್ಲಿ ಇಂದು ವಾಲ್ಮೀಕಿ ಜಯಂತ್ಯೋತ್ಸವ

ರಾಣೇಬೆನ್ನೂರು ತಾಲ್ಲೂಕು ಆಡಳಿತ, ತಾಲ್ಲೂಕು ಪಂಚಾಯತ್, ಸಮಾಜ ಕಲ್ಯಾಣ ಇಲಾಖೆ ಹಾಗೂ ಸ್ಥಳೀಯ ಅಖಿಲ ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾದ ವತಿಯಿಂದ ತಾಲ್ಲೂಕು ಸಭಾ ಭವನದಲ್ಲಿ ಇಂದು 'ವಾಲ್ಮೀಕಿ ಜಯಂತಿ' ಆಚರಿಸಲಾಗುವುದು ಎಂದು ಸಮಾಜದ ತಾಲ್ಲೂಕು ಅಧ್ಯಕ್ಷ ಚಂದ್ರಣ್ಣ ಬೇಡರ ತಿಳಿಸಿದ್ದಾರೆ.


**ಓಂ ವರಸಿದ್ಧಿ ವಿನಾಯಕ**
MP ದಾವಣಗೆರೆ ಶೈಲಿಯ ಕ್ಲೌಡ್ ಕಿಚನ್ ನಮ್ಮ ಮನೆಯಿಂದಲೇ ಊಟ ತಯಾರಿಸಿ ನೀವು ಇರುವ ಸ್ಥಳಕ್ಕೆ ಕಳಿಸುತ್ತೇವೆ. ಸಂಪರ್ಕಿಸಿ :
+91 91102 74329

**HALL TO-LET**
Suitable for Office etc.
1000 Sq. Ft. approx, I Floor, Near Mamas Joint Road, 2nd Main, MCC 'B' Block, Davangere.
Mob: 70190 42531, 94484 23715

**ಬೇಕಾಗಿದ್ದಾರೆ**
ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.
94482 29430

**ವಾಣಿಜ್ಯೋಪಯೋಗಿ ಮಳಿಗೆಗಳು ಬಾಡಿಗೆಗಿವೆ**
ದಾವಣಗೆರೆಯ ಬಿಲಾಲ್ ಕಾಂಪೌಂಡ್ ಹತ್ತಿರ 90x20 ಅಡಿ ಅಳತೆಯ ನೆಲಮಹಡಿ ಹಾಗೂ ಮೊದಲ ಮಹಡಿಯ ಸುಸಜ್ಜಿತ ವಾಣಿಜ್ಯೋಪಯೋಗಿ ಮಳಿಗೆಗಳು ಬಾಡಿಗೆಗಿವೆ. ಸಂಪರ್ಕಿಸಿ
9980040778

**ಸೈಟು ಮಾರಾಟಕ್ಕಿದೆ**
ರಶ್ಮಿ ಹಾಸ್ಟೆಲ್ ಹತ್ತಿರ, 30x40 ಪೂರ್ವಕ್ಕೆ ಸೈಟು ಮಾರಾಟಕ್ಕಿದೆ. ಸಂಪರ್ಕಿಸಿ.
97425 12125

**ತಕ್ಷಣ ಬೇಕಾಗಿದ್ದಾರೆ**
ಟಯೋಟ, ಟಿವಿಎಸ್, ಬ್ರಿಟಾನಿಯಾ, ಟಾಟಾ ಮೋಟಾರ್ಸ್ ಕಂಪನಿಗಳಿಗೆ SSLC, PUC, Degree, ITI ನವರು 18 ಸಾವಿರದಿಂದ 60 ಸಾವಿರ (ವಿದ್ಯಾರ್ಹತೆಯಿಲ್ಲದವರಿಗೂ ವಸತಿ, ಊಟವಿದೆ.
90352 77967

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಅನುಭವವುಳ್ಳ (Nurse) ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ : ಸಿ.ಜಿ. ಆಸ್ಪತ್ರೆ ಹಿಂಭಾಗ, ಪೆವಿಲಿಯನ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.
98450 35710, 77607 39990

**WANTED**
1) Administrative - 1,
2) PRO - 1
**RK Para medical College**
Beside Banapurmata clinic P.J. Extension, Davanagere.
98443 26560

**TUITIONS**
**ಗುರುದತ್ತ ಬಿ. ನಾಡಿಗೇರ್**
Class 6 ಇಂದ Class 10
CBSE / ICSE Boards,
NEET / IIT - JEE / Olympiads
Memory Techniques + Hand Writing
97398 65711, 94822 44114

**TUITIONS**
**ಗುರುದತ್ತ ಬಿ. ನಾಡಿಗೇರ್**
PUC I / PUC II / Longterm / PCMB
NEET / IIT - JEE / KCET / CLAT - Printed Notes + Study Materials
97398 65711, 94822 44114

**ಡ್ರೈವರ್ ಬೇಕಾಗಿದ್ದಾರೆ**
ನಗರದ ಪ್ಯಾಕೇಜ್ಡ್ ಡ್ರಿಂಕಿಂಗ್ ವಾಟರ್ ಫ್ಯಾಕ್ಟರಿಗೆ ಟಾಟಾ ಏಸ್ ಹಾಗೂ ಟಾಟಾ ವಿಂಟ್ರಾ-30 ಓಡಿಸಲು ಲೈಸೆನ್ಸ್ ಹೊಂದಿರುವವರು ಡ್ರೈವರ್ ಕೆಲಸಕ್ಕೆ ಬೇಕಾಗಿದ್ದಾರೆ. ಆಸಕ್ತರು ಖುದ್ದಾಗಿ ಸಂಪರ್ಕಿಸಿ :
**ಪ್ರತೀಕ್ ಎಂಟರ್ ಪ್ರೈಸಸ್**
ನಾಗನೂರು-ಶಾಮನೂರು ರಸ್ತೆ, ಶಾಮನೂರು, ದಾವಣಗೆರೆ.
9448110287

**WANTED**
**SALES & SERVICE**
**Royal Automobiles**
Kusagur Building, Shivakumar swamy Layout, 2nd Stage Hadadi Road, Davangere-5.
97405 91365

**ಸೈಟುಗಳು ಮಾರಾಟಕ್ಕಿವೆ**
ಹೈಟೆಕ್ ಹಾಸ್ಪಿಟಲ್ ಹಿಂಭಾಗ ಪಾಮೇನಹಳ್ಳಿ ಹತ್ತಿರ ಫೈನಲ್ ಅಪ್ರೂವ್ಡ್ ಸೈಟುಗಳು ಮಾರಾಟಕ್ಕಿವೆ. 20x45 ಪೂರ್ವ, ದರ 2,250/-, 20x45 ಪೂರ್ವ, ದರ 2,250/-, 20x30 ಪೂರ್ವ, ದರ 2,150/-, 40x45 ಪೂರ್ವ-ಉತ್ತರ ಕಾರ್ನರ್ ಸೈಟು. ದರ 2,250/- ಬ್ಯಾಂಕ್ ಲೋನ್ ಆಗುತ್ತದೆ.
ಮೊ : 9740258276

**ಬೆಂಗಳೂರಿನಲ್ಲಿ ಬೇಕಾಗಿದ್ದಾರೆ**
ಕಾರ್ ಡ್ರೈವರ್ ಕಮ್ ಸೆಕ್ಯೂರಿಟಿ ಆಟೋಮೆಟಿಕ್ ಗೇರ್ ಅನುಭವ ಇರಬೇಕು. ಸಂಬಳ 15000/- O.T. ಸಿಗುತ್ತದೆ. ವಸತಿ ಸೌಲಭ್ಯವಿದೆ.
97400 98047

**ಹೋಟೆಲ್ ಕೆಲಸಕ್ಕೆ ಬೇಕಾಗಿದ್ದಾರೆ**
*ಹೆಲ್ಪರ್ *ಸಪ್ಲೈಯರ್ *ಕ್ಲೀನರ್
ವಯೋಮಿತಿ : 18 ರಿಂದ 30 ವರ್ಷ
ಕರೆ ಮಾಡುವ ಸಮಯ : ಬೆಳಗ್ಗೆ : 10:00 ರಿಂದ 5:00
99162 87164

**Wanted Teachers**
**Maths & Computer -** B.Sc (PCM/PMCs)+B.Ed
**Biology -** M.Sc (Botany/Zoology)+B.Ed
**Social -** M.A.(History,Civics,Geography)+B.Ed
Ph : 9844060736, 8050553355

**ಬೇಕಾಗಿದ್ದಾರೆ**
**ಟೂನ್ಜ್**
ದಾವಣಗೆರೆಯ ಪ್ರತಿಷ್ಠಿತ ಆಟಿಕೆಗಳ ಹಾಗೂ ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಯುವಕ / ಯುವತಿಯರು ಬೇಕಾಗಿದ್ದಾರೆ.
**TOONZ**
7ನೇ ಮುಖ್ಯರಸ್ತೆ, 7ನೇ ಅಡ್ಡರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.
99015 38142
73492 47160

**ಬೇಕಾಗಿದ್ದಾರೆ**
(ಏಜೆಂಟರ್ & ಡಿಸ್ಟ್ರಿಬ್ಯೂಟರ್ಸ್)
ನಾಗವಲ್ಲಿ ಪ್ರೊಡಕ್ಟ್, ಅಂಕೋಲಾ (ಉತ್ತರ ಕನ್ನಡ ಜಿಲ್ಲೆ) ರವರ ಡಯಾಬಿಟೀಸ್ ನಿರ್ವಹಣೆಗೆ ಹಾಗೂ ವಿವಿಧ ಔಷಧಿಗಳನ್ನು ಮಾರಾಟ ಮಾಡಲು ಏಜೆಂಟ್ ಹಾಗೂ ಡಿಸ್ಟ್ರಿಬ್ಯೂಟರ್ಸ್ ಬೇಕಾಗಿದ್ದಾರೆ.
96324 21718
91102 08039

**ಬೇಕಾಗಿದ್ದಾರೆ**
ಕ್ಲಿನಿಕ್ ನಲ್ಲಿ ರಿಸೆಪ್ಷನಿಸ್ಟ್ (ಬೇಸಿಕ್ ಕಂಪ್ಯೂಟರ್ ಜ್ಞಾನ ಇರಲಿ) ಕೆಲಸ ಮಾಡಲು ಮಹಿಳಾ ಅಭ್ಯರ್ಥಿ ಬೇಕಾಗಿದ್ದಾರೆ. ಬೆಳಿಗ್ಗೆ 11ರಿಂದ ಸಂಜೆ 8ರ ಒಳಗೆ ಫೋನ್ ಮಾಡಿ ಸಂಪರ್ಕಿಸಿ:
99726 52844

**ಮಾರಾಟಕ್ಕೆ**
ಭಗೀರಥ ಸರ್ಕಲ್ ನಿಟ್ಟುವಳ್ಳಿ ದಾವಣಗೆರೆ ಹತ್ತಿರ ಇರುವ 20x30 ಸೈಜಿನ ಮನೆಗಳು ಮಾರಾಟಕ್ಕೆ ಇವೆ. ಸಂಪರ್ಕಿಸಿ :
94484 39639

**WANTED**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು Sales Girls ಬೇಕಾಗಿದ್ದಾರೆ. ಸಂಪರ್ಕಿಸಿ :
**ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್**
ಬಿನ್ನಿ ಕಂಪನಿ ರಸ್ತೆ, ದಾವಣಗೆರೆ - 1

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಕೆಲಸಗಾರರು ಬೇಕಾಗಿದ್ದಾರೆ.
98442-94446

**ಬೇಕಾಗಿದ್ದಾರೆ**
ಕಛೇರಿ ಕೆಲಸಕ್ಕೆ ಅನುಭವಿ ಕಂಪ್ಯೂಟರ್ (MS-Office Excel) ಆಪರೇಟರ್ ಬೇಕಾಗಿದ್ದಾರೆ. ದಾವಣಗೆರೆ ನಗರದ ಮಹಿಳಾ ಅಭ್ಯರ್ಥಿಗೆ ಆದ್ಯತೆ.
94480 13311
63617 92665

**ಫ್ಲಾಟ್ ಲೀಸ್‌ಗೆ ಇದೆ**
ವಿದ್ಯಾನಗರ ಕಲ್ಲೇಶ್ವರ ಅಪಾರ್ಟ್‌ಮೆಂಟ್‌ನಲ್ಲಿ 2BHK ಫ್ಲಾಟ್ ಲೀಸ್‌ಗೆ ಇವೆ. ಸಂಪರ್ಕಿಸಿ
99807 28533

**ತಕ್ಷಣ ಬೇಕಾಗಿದ್ದಾರೆ**
**ರಾಜ್‌ಭವನ್ ಬಾರ್ ಅಂಡ್ ರೆಸ್ಟೋರೆಂಟ್, ಹರಿಹರ**
● ಸಪ್ಲೈಯರ್
● ಬಿಲ್ಲಿಂಗ್ ಕಂಪ್ಯೂಟರ್ಸ್
ಅನುಭವವುಳ್ಳವರಿಗೆ ಆಕರ್ಷಕ ಸಂಬಳ. ಸಂಪರ್ಕಿಸಿ :
99726 98591, 94490 37488

**ಫ್ಲಾಟ್‌ಗಳು ಭೋಗ್ಯಕ್ಕಿವೆ**
ದಾವಣಗೆರೆ ಸಿಟಿ ಎಸ್.ಎಸ್. ಬಡಾವಣೆ, ಎ ಬ್ಲಾಕ್, ಇಂಡೋರ್ ಸ್ಟೇಡಿಯಂ ಹತ್ತಿರ ನಿರ್ಮಿಸಿರತಕ್ಕ ಅಪಾರ್ಟ್‌ಮೆಂಟ್‌ನಲ್ಲಿ ಗ್ರಾನೈಟ್ ಫ್ಲೋರಿಂಗ್, ವಾರ್ಡ್‌ರೂಬ್, ದೇವರಮನೆ, ನೀರಿನ ಸೌಕರ್ಯ, ಲಿಫ್ಟ್ ಸೌಕರ್ಯ, ಕಾರ್ ಪಾರ್ಕಿಂಗ್ ಸೌಲಭ್ಯವುಳ್ಳ ಫ್ಲಾಟ್‌ಗಳು ಭೋಗ್ಯಕ್ಕಿವೆ.
ಬಿ.ಎಸ್. ಸಂತೋಷ
96322 67555
98440 65710

**WANTED**
Hindi teacher for tuition at home for 7 Std. Student
Contact: 98807 08289

**ಶಾಕಿರ ಬ್ಯೂಟಿ ಪಾರ್ಲರ್**
10th main, PJ Extn, Davanagere, ಮನೆ ಕೆಲಸ ಮತ್ತು ಕ್ಲೀನಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ.
93420 19013

**ತಕ್ಷಣ ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.
94816 72542
**ರಾಜ್ ಹಂಸ್ ಕಲೆಕ್ಷನ್ಸ್,**
ಚಾಮರಾಜಪೇಟೆ, ದಾವಣಗೆರೆ.

**ಉದ್ಯೋಗಾವಕಾಶ**
ಹೆಸರಾಂತ ಕಂಪನಿಯಾದ ಸಂಜೀವಿನಿ ಹೆಲ್ತ್‌ಕೇರ್‌ನಲ್ಲಿ ಹೋಂ ನರ್ಸಿಂಗ್ ಕೆಲಸ ಮಾಡಲು (ವಯೋವೃದ್ಧರನ್ನು ನೋಡಿಕೊಳ್ಳಲು) ಮಹಿಳೆಯರು, ಯುವತಿಯರು ಬೇಕಾಗಿದ್ದಾರೆ. ವಿದ್ಯಾರ್ಹತೆ 7th, 10th PUC, ANM, GNM, Any Degree ಉಚಿತ ಊಟ, ವಸತಿಯೊಂದಿಗೆ 18,000 ರೂ. ನಿಂದ 20,000 ರೂ. ಸಂಬಳವಿದೆ. ಆಸಕ್ತಿ ಇರುವವರು ಸಂಪರ್ಕಿಸಿ.
95355 32369

**Requirement**
Receptionist (only female)
Age: 20-25, Salary: 10000 - 12000
**HAIRPOINT SALON**
MCC `B' block, 7th main 3rd cross, Davanagere.
9148319342, 9738664400
08192220755

**ಉತ್ತಮ ಅಡಿಕೆ ಸಸಿಗಳು ಮಾರಾಟಕ್ಕಿವೆ**
ನಮ್ಮಲ್ಲಿ ಉತ್ತಮವಾದ ಅಡಿಕೆ ಸಸಿಗಳು ಮಾರಾಟಕ್ಕಿವೆ. 2 ಕೆ.ಜಿ. ಚೀಲಗಳು ರೂ. 25/-
ಸ್ಥಳ : ದೊಡ್ಡಬಾತಿ
90088 00080

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
**ಅಸ್ತಮಾ, ಕೀಲು ನೋವು**
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**SMS Convent & High School**
**Teacher's Requirment**
Rajeevgandi Badavane, DVG.
B.Sc., D.Ed., B.Ed., Primary-01, High school-01
Clerical, Office Work (Any Degree)-01, Spoken English-01
96631 95531, 98861 30657

**Gnanagangotri School, Kandigal**
**Teacher's Requirment**
B.Sc., D.Ed., B.Ed., Primary-01, High Primary-01
Clerical, Office Work (Any Degree)-01, Spoken English-01
96631 95531, 85468 17919

**WANTED**
WORKING PHARMACIST
Qualification : D Pharma/B Pharma
Age : Below 40 Years
Scale : Rs. 16000 to 18200/- (ESI+PF+Incentive)
90355 03140

**FLAT FOR LEASE**
3 BHK, Sqft :1888
**AM Apartment**
**Nainika Prime Rose**
Vidyanagar last city bus stop Davanagere.
89519 38228, 80502 22181

## ನಗರದಲ್ಲಿ ಇಂದು ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರಪಾಲಿಕೆ ಹಾಗೂ ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ಇವರುಗಳ ಸಂಯುಕ್ತಾಶ್ರಯದಲ್ಲಿ ಇಂದು ಬೆಳಿಗ್ಗೆ 11.30ಕ್ಕೆ ಗುಂಡಿ ಮಹಾದೇವಪ್ಪ ಕಲ್ಯಾಣ ಮಂಟಪದಲ್ಲಿ ಶ್ರೀಮಹರ್ಷಿ ವಾಲ್ಮೀಕಿ ಜಯಂತಿ ಆಯೋಜಿಸಲಾಗಿದೆ.

ಕಾರ್ಯಕ್ರಮವನ್ನು ಸಚಿವಎಸ್.ಎಸ್. ಮಲ್ಲಿಕಾರ್ಜುನ್ ಉದ್ಘಾಟಿಸುವರು. ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅವರು ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳು : ಡಾ. ಪ್ರಭಾ ಮಲ್ಲಿಕಾರ್ಜುನ್, ಕೆ.ಎಸ್. ಬಸವಂತಪ್ಪ, ಕೆ. ಚಮನ್ ಸಾಬ್, ಕೆ. ಅಬ್ದುಲ್ ಜಬ್ಬಾರ್, ದಿನೇಶ್ ಕೆ. ಶೆಟ್ಟಿ, ಗಂಗಾಧರಸ್ವಾಮಿ ಜಿ.ಎಂ., ಸುರೇಶ್ ಬಿ. ಇಟ್ನಾಳ್, ಉಮಾ ಪ್ರಶಾಂತ್, ಡಾ. ನವೀನ್ ಎಸ್. ಮಠದ ಮತ್ತಿತರರು.

ಈ ಕಾರ್ಯಕ್ರಮಕ್ಕೂ ಮೊದಲು ಬೆಳಿಗ್ಗೆ 10 ಗಂಟೆಗೆ ಶ್ರೀ ವೀರ ಮದಕರಿ ನಾಯಕ ವೃತ್ತದಲ್ಲಿರುವ ಶ್ರೀ ರಾಜವೀರ ಮದಕರಿ ನಾಯಕರ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಗುವುದು.

## ನಗರದಲ್ಲಿ ಇಂದು ಶಿವಾನುಭವಗೋಷ್ಠಿ

ಬಾಡಾ ಕ್ರಾಸ್ ಬಳಿ ಇರುವ ಶ್ರೀ ಗುರು ಪುಟ್ಟರಾಜ ನಗರದ ಶ್ರೀ ವೀರೇಶ್ವರ ಪುಣ್ಯಾಶ್ರಮದ ವತಿಯಿಂದ ಇಂದು ಬೆಳಿಗ್ಗೆ 11.30 ಕ್ಕೆ ಆಶ್ರಮದ ಸಭಾಂಗಣದಲ್ಲಿ 284 ನೇ ಸೀಗೆ ಹುಣ್ಣಿಮೆ ಶಿವಾನುಭವಗೋಷ್ಠಿ ಮತ್ತು ಸಂಗೀತ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ, ಶ್ರೀ ಕಲ್ಲಯ್ಯಜ್ಜ ಸಾನ್ನಿಧ್ಯ ವಹಿಸುವರು. ಶಾಮನೂರು ಶಿವಶಂಕರಪ್ಪ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಡಾ. ಅಥಣಿ ಎಸ್. ವೀರಣ್ಣ, ಶಶಿಕಲಾ ಮೂರ್ತಿ ನಲ್ಕುದುರೆ, ಎಸ್.ಕೆ. ವೀರಣ್ಣ, ಜೆ.ಎನ್. ಕರಿಬಸಪ್ಪ ಮತ್ತಿತರರು ಭಾಗವಹಿಸಲಿದ್ದಾರೆ.

# ಉತ್ತಮ ಇಳುವರಿ ಕೊಡುವ ನವಣೆ ತಳಿ ಬಳಸಿ

## ಜಗಳೂರು ಕ್ಷೇತ್ರೋತ್ಸವದಲ್ಲಿ ಬೇಸಾಯ ತಜ್ಞ ಬಿ.ಓ ಮಲ್ಲಿಕಾರ್ಜುನ್ ಸಲಹೆ




ಜಗಳೂರು, ಅ.16- ಬರ ನಿರೋಧಕ, ಮಳೆಯಾಶ್ರಿತ ನವೀನ ನವಣೆ ತಳಿಯಾದ ಹೆಚ್‌ಎನ್- 46, ಉತ್ತಮವಾಗಿ ಬೆಳೆದಿದ್ದು, ಸ್ಥಳೀಯ ತಳಿಗಳಿಗಿಂತ ಅಧಿಕ ಇಳುವರಿ ಕೊಡುತ್ತದೆ ಎಂದು ಬೇಸಾಯ ತಜ್ಞ ಬಿ. ಓ ಮಲ್ಲಿಕಾರ್ಜುನ್ ತಿಳಿಸಿದರು.

ಜಗಳೂರು ತಾಲ್ಲೂಕಿನ ಕಲ್ಲೇದೇವರಪುರ ಗ್ರಾಮದಲ್ಲಿ ದಾವಣಗೆರೆಯ ಐಸಿಎಆರ್- ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ವತಿಯಿಂದ ನಿನ್ನೆ ಹಮ್ಮಿಕೊಂಡಿದ್ದ ಅಧಿಕ ಇಳುವರಿ ನೀಡುವ ನವಣೆ ಬೆಳೆಯಲ್ಲಿ ಹೊಸ ತಳಿಯ ಕ್ಷೇತ್ರೋತ್ಸವದಲ್ಲಿ ಅವರು ಮಾತನಾಡಿದರು.

ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಬಿಡುಗಡೆ ಮಾಡಿದ ಹೊಸ ನವಣೆ ತಳಿಯ (ಹೆಚ್‌ಎನ್-46) ಮುಂಚೂಣಿ ಪ್ರಾತ್ಯಕ್ಷಿಕೆಯನ್ನು ಹಮ್ಮಿಕೊಳ್ಳಲಾಗಿತ್ತು.

ತಳಿಯು ಬಿತ್ತನೆಯಾದಾಗಿನಿಂದ ಇಲ್ಲಿ ತನಕ ಉತ್ತಮ ಮಳೆ ಬಂದಿದ್ದು, ಉತ್ತಮ ಇಳುವರಿ ಬರುವ ಲಕ್ಷಣಗಳಿವೆ ಎಂದು ತಿಳಿಸಿದ ಮಲ್ಲಿಕಾರ್ಜುನ್, ರೈತರು ಕೊಯ್ಲಾದ ನಂತರ ಬೀಜವನ್ನು ಶೇಖರಣೆ ಮಾಡಿ ಇತರೆ ರೈತರೊಂದಿಗೆ ಹಂಚಿಕೊಳ್ಳಬೇಕೆಂದು ತಿಳಿಸಿದರು.

ಪ್ರಗತಿಪರ ಹಾಗೂ ಪ್ರಾತ್ಯಕ್ಷಿಕೆ ರೈತರಾದ ಗುರುಮೂರ್ತಿ ಮಾತನಾಡಿ, ನವಣೆಯ ತೆನೆಗಳು ಒಂದು ಅಡಿಗಿಂತ ಉದ್ದವಿದ್ದು, ಎತ್ತರ ಕೂಡ ಬೆಳೆದಿವೆ. ನಮ್ಮ ಸ್ಥಳೀಯ ತಳಿಗಳಿಗಿಂತ ಈ ಹೊಸ ತಳಿಯು ಹತ್ತರಿಂದ ಹನ್ನೆರಡು ಕ್ವಿಂಟಾಲ್ ಇಳುವರಿ ಬರುವ ನಿರೀಕ್ಷೆ ಇದೆ ಎಂದು ತಿಳಿಸಿದರು.

ಉತ್ತಮ ಆರೋಗ್ಯಕ್ಕಾಗಿ ಸಿರಿಧಾನ್ಯಗಳನ್ನು ಸೇವಿಸುವು ದರಿಂದ ಕೃಷಿಕರು ಆರೋಗ್ಯವನ್ನು ಕಾಪಾಡಿಕೊಳ್ಳ ಬಹುದೆಂದು ತೋಟಗಾರಿಕೆ ತಜ್ಞ ಬಸವನಗೌಡ ತಿಳಿಸಿದರು.

ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳು ಸರಿಯಾದ ಸಮಯಕ್ಕೆ ಸಲಹೆ ಗಳನ್ನು ನೀಡಿ ಪ್ರೋತ್ಸಾಹಿಸು ತ್ತಿರುವುದರಿಂದ, ಬೆಳೆಯನ್ನು ರೈತರು ಉತ್ತಮವಾಗಿ ಬೆಳೆದಿದ್ದು, ಅಧಿಕ ಇಳುವರಿ ಬರುವ ನಿರೀಕ್ಷೆಯಲ್ಲಿದ್ದಾರೆ ಎಂದು ಬಿದರಕೆರೆ ತರಳಬಾಳು ಅಮೃತ ರೈತ ಉತ್ಪಾದಕ ಕಂಪನಿಯ ನಿರ್ದೇಶಕ ಕೃಷ್ಣಮೂರ್ತಿ ಅಭಿಪ್ರಾಯ ಪಟ್ಟರು.


**ಅನ್ವಯ ಆಯುರ್ವೇದ ಆಸ್ಪತ್ರೆ**

ANVAYA

ವಿಳಾಸ : # 1981, 10ನೇ ಕ್ರಾಸ್, ಎಂ.ಸಿ.ಸಿ. 'ಎ' ಬ್ಲಾಕ್, ಆಶ್ರಯ ಆಸ್ಪತ್ರೆ ಹಿಂಭಾಗ, ದಾವಣಗೆರೆ.
ಫೋ. 08192-252228, ಮೊ. 8618642929

**ಆಯುರ್ವೇದದ ಮಕ್ಕಳ ತಜ್ಞೆ ದಾವಣಗೆರೆಯಲ್ಲಿ**

ಬೆಂಗಳೂರಿನ ಪ್ರಖ್ಯಾತ ವೈದ್ಯರಾದ ಡಾ॥ ಪೂರ್ಣಿಮಾ ಅವರು ದಾವಣಗೆರೆಗೆ ಭೇಟಿ ನೀಡಲಿದ್ದಾರೆ. ಮಕ್ಕಳಲ್ಲಿ ಕಂಡು ಬರುವಂತಹ ವಿವಿಧ ಕಾಯಿಲೆಗಳಿಗೆ ಆಯುರ್ವೇದದ ಔಷಧಿಗಳಿಂದ ಸರಳ ಪರಿಹಾರ ನೀಡಲಾಗುತ್ತದೆ.

ಭೇಟಿಯ ದಿನಾಂಕ : 20.10.2024ರ ಭಾನುವಾರ, ಸಮಯ : ಬೆಳಿಗ್ಗೆ 10 ರಿಂದ 2ರವರೆಗೆ

ಮೊದಲೇ ಹೆಸರು ನೋಂದಾಯಿಸಿದವರಿಗೆ ಮಾತ್ರ ಅವಕಾಶ

**ಬೆಳಿಗ್ಗೆ - 10.00 ರಿಂದ ಮಧ್ಯಾಹ್ನ 2.00ರ ವರೆಗೆ**



**WANTED/ಕೆಲಸಕ್ಕೆ ಬೇಕಾಗಿದ್ದಾರೆ**

Wholesale ಔಷಧಿ ಅಂಗಡಿಗೆ ಪುರುಷರು ಕೆಲಸಕ್ಕೆ ಬೇಕಾಗಿದ್ದಾರೆ.
Qualification : (SSSLC, PUC) English ಓದಲು ಬರಬೇಕು

Address : ಎ.ಕೆ. ಫಾರ್ಮ, ಹದಡಿ ರೋಡ್, ತರಳಬಾಳು ಸ್ಕೂಲ್ ಎದುರು, ಶ್ರೀನಿವಾಸ ನಗರ, ದಾವಣಗೆರೆ.
ಫೋ : 88678 56784, 99643 75596


## ಹೊಸ ಭರಂಪುರ ಬಡಾವಣೆಯ ಗಣಪತಿ ವಿಸರ್ಜನೆ




ಹರಿಹರ,ಅ.16- ನಗರದ ಹೊಸ ಭರಂಪುರ ಬಡಾವಣೆಯ ಹರಿಹರ ಕಾ ಗಣಪತಿ ವಿಸರ್ಜನೆಯ ಮೆರವಣಿಗೆಗೆ ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಟ್ರ್ಯಾಕ್ಟರ್ ಓಡಿಸುವ ಮೂಲಕ ಚಾಲನೆ ನೀಡಿದರು.

ಮೆರವಣಿಗೆಯಲ್ಲಿ ನಂದಿಕೋಲು, ಸಮಾಳ, ಡ್ರಮ್ ಸೆಟ್, ಗೊಂಬೆ ಕುಣಿತ ಸೇರಿದಂತೆ ವಿವಿಧ ಜಾನಪದ ಕಲಾ ತಂಡಗಳು ಭಾಗವಹಿಸಿದ್ದು, ಡಿಜೆ ಸೌಂಡ್ ಸಿಸ್ಟಮ್ ಹಾಡಿಗೆ ಯುವಕರು ಮತ್ತು ಯುವತಿಯರು ಕುಣಿದು ಕುಪ್ಪಳಿಸಿದರು. ಈ ಸಂದರ್ಭದಲ್ಲಿ ಹೊಸಭರಂಪುರ ಬಡಾವಣೆಯ ಯುವಕರ ಸಂಘದ ಅಧ್ಯಕ್ಷ ಸುರೇಶ್ ಚಂದಪೂರ್, ನಗರಸಭೆ ಸದಸ್ಯೆ ನಿಂಬಕ್ಕ ಚಂದಪೂರ್, ಹೆಚ್. ಬಿ. ಚಂದ್ರಶೇಖರ್, ಕೆ.ಬಿ. ರಾಜಶೇಖರ್, ಎಂ. ಚಿದಾನಂದ ಕಂಚಿಕೇರಿ ಮತ್ತು ಇತರರು ಹಾಜರಿದ್ದರು.

## ಶಿವನಕೆರೆ ಬಸವಲಿಂಗಪ್ಪರ ಪುಸ್ತಕಗಳ ಬಿಡುಗಡೆ



ದಾವಣಗೆರೆ, ಅ.16- ಹಿರಿಯ ಲೇಖಕ ಶಿವನಕೆರೆ ಬಸವಲಿಂಗಪ್ಪ ಅವರು ಬರೆದಿರುವ ಬೌದ್ಧ ಧರ್ಮದ ತಾತ್ವಿಕತೆಯನ್ನು ಸಾರುವ ಬುದ್ಧನ ಧಮ್ಮಪದ ಮತ್ತು ಟಾಲ್ ಸ್ಟಾಯ್ ಅವರ '365 ಜೀವನಾನಂದದ ಸೂತ್ರಗಳು' ಎರಡು ಪುಸ್ತಕಗಳನ್ನು ಸಾಣೇಹಳ್ಳಿಯಲ್ಲಿ ಕಳೆದ ವಾರ ನಡೆದ ಸರಳ ಕಾರ್ಯಕ್ರಮವೊಂದರಲ್ಲಿ ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯದಲ್ಲಿ ಮತ್ತು ಡಾ. ಎಸ್. ಜಿ. ಸಿದ್ಧರಾಮಯ್ಯ, ಜಿ.ಎಸ್.ಜಯದೇವ, ಡಾ. ಜೆ.ಎಸ್. ಪಾಟೀಲ್, ಮಹಿಮಾ ಜೆ.ಪಟೇಲ್, ಪ್ರೊ. ಎಂ. ಬಸವರಾಜ್, ಕುಮಾರ್, ಪ್ರೊ. ಸೋಮಶೇಖರಪ್ಪ, ಅಬ್ದುಲ್ ರೆಹಮಾನ್ ಪಾಷಾ, ಪ್ರೊ. ರಾಜಾರಾಮ್ ತೋಳ್ಪಾಡಿ, ಕೋರಿ ಶೆಟ್ಟರ್ ಅವರುಗಳ ಸಮ್ಮುಖದಲ್ಲಿ ಲೋಕಾರ್ಪಣೆ ಮಾಡಲಾಯಿತು.


**IN THE COURT OF THE HON'BLE 1ST ADDITIONAL CIVIL JUDGE AND JMFC AT DAVANAGERE**

**O.S. NO - 557/2017**

**Plaintiff :** Smt. Gouramma A.H Versus

**Defendant :** Sri Babu Naik s/o Lakshamana Naik, Age : Major, R/o Chikkanahalli New Extension, Nittuvalli, Davanagere city, Davanagere.

**COURT NOTICE TO RESPONDENT NO : 1(A) U/O 5 RULE 20 OF CPC**

Take notice that the plaintiff filed the above case in O.S. 557/2017 On the file of the 1st Additional Civil Judge, at Davanager. For recovery of money.

The defendant shall appear in person or through an advocate and say regarding the case on 29.11.2024 before this Hon'ble court at 11 Am, Failing which the case against you will be heard and determined in your absence. Given under my hand and seal of the court this the 15.10.2024

Advocate for Petitioners
**Sri D.P. Basavaraj**,
Advocate,
Davanagere.

By the order of the court
By order Chief Ministerial Officer
Prl, Civil Judge and JMFC, Court
Principal Junior Civil Court and
JMFC at Davanagere.


# ಸಿಎಂ, ಡಿಸಿಎಂ ಹೆಸರು ಹೇಳಲು ಇಡಿ ಒತ್ತಡ: ನಾಗೇಂದ್ರ

ಬೆಂಗಳೂರು, ಅ. 16 - ಬಹುಕೋಟಿ ಮಹರ್ಷಿ ವಾಲ್ಮೀಕಿ ನಿಗಮದ ಹಗರಣದಲ್ಲಿ ಮುಖ್ಯಮಂತ್ರಿ ಸಿದ್ದರಾ ಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೆಸರು ಹೇಳುವಂತೆ ಜಾರಿ ನಿರ್ದೇಶನಾಲಯ ತಮ್ಮ ಮೇಲೆ ಒತ್ತಡ ಹೇರಿತ್ತು ಎಂದು ಮಾಜಿ ಸಚಿವ ಬಿ. ನಾಗೇಂದ್ರ ಆರೋಪಿಸಿದ್ದಾರೆ. ಈ ಪ್ರಕರಣದಲ್ಲಿ ಬಂಧಿತರಾಗಿದ್ದ ನಾಗೇಂದ್ರ ನಿನ್ನೆ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದರು.

ಬಿಜೆಪಿ ಒತ್ತಡದ ಕಾರಣದಿಂದಾಗಿ ಜಾರಿ ನಿರ್ದೇಶನಾಲಯ ತಮ್ಮನ್ನು ಬಂಧಿಸಿತ್ತು. ರಾಜ್ಯ ಕಾಂಗ್ರೆಸ್ ಸರ್ಕಾರವನ್ನು ಅಸ್ಥಿರಗೊಳಿಸಲು ಬಿಜೆಪಿ ಬಯಸಿದೆ ಎಂದವರು ಆರೋಪಿಸಿದ್ದಾರೆ.


ವಾಲ್ಮೀಕಿ ನಿಗಮದ ಹಗರಣದಲ್ಲಿ ನಾನು ಯಾವುದೇ ಪಾತ್ರ ಹೊಂದಿಲ್ಲ. ಆದರೂ ಹಠಾತ್ತನೆ ನನ್ನನ್ನು ಬಂಧಿಸಲಾಗಿತ್ತು.

ಬಿಜೆಪಿ ಕೇಂದ್ರ ನಾಯಕರ ಒತ್ತಡದ ಕಾರಣದಿಂದಾಗಿ ಬಂಧಿಸಲಾಗಿತ್ತು. ನನ್ನ ಬಂಧನದ ಮೂಲಕ ರಾಜ್ಯ ಕಾಂಗ್ರೆಸ್ ಸರ್ಕಾರವನ್ನು ಅಸ್ಥಿರಗೊಳಿಸಲು ಜಾರಿ ನಿರ್ದೇಶನಾಲಯ ಬಯಸಿದೆ ಎಂದವರು ಆರೋಪಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಶಿವಕುಮಾರ್ ಹೆಸರನ್ನು ಈ ಹಗರಣದಲ್ಲಿ ಸಿಲುಕಿಸಬೇಕು ಎಂದು ನನ್ನ ಮೇಲೆ ಒತ್ತಡ ಹೇರಲಾಗಿತ್ತು. ಹಗರಣದಲ್ಲಿ ನನ್ನ ಪಾತ್ರವೇ ಇಲ್ಲ, ಹೀಗಿರುವಾಗ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಪಾತ್ರ ಬರುವುದೇ ಇಲ್ಲ ಎಂದು ನಾನು ಹೇಳಿದ್ದೆ ಎಂದು ನಾಗೇಂದ್ರ ತಿಳಿಸಿದ್ದಾರೆ.

## ಗೋವಿನಹಾಳ್ ಪಿಎಸಿಎಸ್ ಅಧ್ಯಕ್ಷರಾಗಿ ಕಾವೇರಿ ಬಸವರಾಜಪ್ಪ, ಉಪಾಧ್ಯಕ್ಷರಾಗಿ ಟಿ.ಸಿದ್ದಪ್ಪ





ಮಲೇಬೆನ್ನೂರು, ಅ.16- ಗೋವಿನಹಾಳ್ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಮೂಗಿನಗೊಂದಿಯ ಕಾವೇರಿ ಬಸವರಾಜಪ್ಪ ಮತ್ತು ಉಪಾಧ್ಯಕ್ಷರಾಗಿ ಜಿ. ಟಿ. ಕಟ್ಟೆಯ ಟಿ. ಸಿದ್ದಪ್ಪ ಅವರು ಬುಧವಾರ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಹಕಾರ ಅಭಿವೃದ್ಧಿ ಅಧಿಕಾರಿ ಶ್ರೀಮತಿ ಸುನೀತಾ ಅವರು ಚುನಾವಣಾಧಿಕಾರಿಯಾಗಿ ಕಾರ್ಯನಿರ್ವಹಿಸಿದರು. ಸಂಘದ ನಿರ್ದೇಶಕರಾದ ಕೆ. ಹೆಚ್. ಬಸವರಾಜಪ್ಪ, ಕುಮಾರ್ ಪಾಟೀಲ್, ಬಿ. ಹೆಚ್. ಗದಿಗೆಪ್ಪ, ಸಿ. ಹೆಚ್. ತಿಪ್ಪೇಶ್, ಶ್ರೀಮತಿ ಡಿ. ಹೆಚ್. ಪುಷ್ಪಾ, ತಿಮ್ಮನಗೌಡ ಹೆಚ್. ಪಾಟೀಲ್, ಕೆ. ಎಂ. ಹನುಮಗೌಡ, ಗೌರವ ಕಾರ್ಯದರ್ಶಿ ಕರಿಬಸಪ್ಪ, ಸಿಇಓ ಪಿ.ಡಿ. ತಿಪ್ಪೇಸ್ವಾಮಿ ಈ ವೇಳೆ ಹಾಜರಿದ್ದರು.

## ಹರಿಹರದಲ್ಲಿ ಇಂದು ವಾಲ್ಮೀಕಿ ಜಯಂತಿ

ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಇಂದು ಬೆಳಿಗ್ಗೆ 10.30ಕ್ಕೆ ಎಂ.ಬಿ. ಗುರುಸಿದ್ದಸ್ವಾಮಿ ಸಭಾಂಗಣದಲ್ಲಿ ಶಾಸಕ ಬಿ.ಪಿ. ಹರೀಶ್ ಅಧ್ಯಕ್ಷತೆಯಲ್ಲಿ ಹಮ್ಮಿಕೊಳ್ಳಲಾಗಿದೆ.

ಮುಖ್ಯ ಅತಿಥಿಗಳಾಗಿ ಎಸ್.ಎಸ್. ಮಲ್ಲಿಕಾರ್ಜುನ್, ಡಾ. ಪ್ರಭಾ ಮಲ್ಲಿಕಾರ್ಜುನ್, ಚಿದಾನಂದ ಎಂ. ಗೌಡ, ವೈ.ಎಸ್. ನವೀನ್, ಡಿ.ಟಿ. ಶ್ರೀನಿವಾಸ್, ಕವಿತಾ ಮಾರುತಿ ಬೇಡರ್, ಎಸ್. ದೇವಾನಂದ, ಸುರೇಶ್ ಸಗರಿ, ಡಿ.ಎಂ. ಹಾಲಸ್ವಾಮಿ ಉಪಸ್ಥಿತರಿರುವರು. ಡಿ.ಟಿ. ತಿಪ್ಪಣ್ಣ ರಾಜು ಉಪನ್ಯಾಸ ನೀಡುವರು.

## ನಾಮದೇವ ಸಿಂಪಿ ಸಮಾಜದಿಂದ ಲಲಿತ ಸಹಸ್ರನಾಮ ಪಾರಾಯಣ



ದಾವಣಗೆರೆ, ಅ. 16 - ನಗರದ ದೊಡ್ಡಪೇಟೆಯ ನಾಮದೇವ ಸಿಂಪಿ ಸಮಾಜದ ವತಿಯಿಂದ ನವರಾತ್ರಿ ಪ್ರಯುಕ್ತ ಉಚಿತ ಲಲಿತ ಸಹಸ್ರನಾಮ ಪಾರಾಯಣವನ್ನು ಏರ್ಪಡಿಸಲಾಗಿತ್ತು.


ನಾಮದೇವ ಸಿಂಪಿ ಸಮಾಜದ ಸಂತ ಸಕ್ಕೂಬಾಯಿ ಮಹಿಳಾ ಮಂಡಳಿ ವತಿಯಿಂದ ಎಸ್.ಕೆ.ಪಿ. ರಸ್ತೆಯ ಶ್ರೀ ವಿಠ್ಠಲ ಹರಿ ಮಂದಿರದಲ್ಲಿ ಸಾಮೂಹಿಕ ಲಲಿತ ಸಹಸ್ರನಾಮ ಪಾರಾಯಣ ಮಾಡಲಾಯಿತು.

ಈ ಸಂದರ್ಭದಲ್ಲಿ ಕೆ. ಕೌಸಲ್ಯಾಯಿ, ಶ್ಯಾಮಲಾ ಎಂ.ಬೊಂಗಾಳೆ, ನಿರ್ಮಲ ಎಂ.ಎಸ್. ವಿಠ್ಠಲ್, ಶೋಭಾ ಎಸ್. ಖಟಾವ್‌ಕರ್, ರೇಣುಕಾಬಾಯಿ ಆರ್.ಪಿಸೆ., ಜಯಶ್ರೀ ವಿ.ಬೊಂಗಾಳೆ, ರೇಖಾ ವಿಠ್ಠಲ್ ರಾಕುಂಡೆ, ರೂಪಾ ಬಿ. ಬೊಂಗಾಳೆ, ಸುಮಂಗಲ ಆರ್. ಮಾಳೋಡೆ, ರತ್ನಮ್ಮ ಖಟಾವ್‌ಕರ್, ಕಾವ್ಯ ಎಸ್. ಖಟಾವ್‌ಕರ್, ವಿನುತಾ ಆನಂದ್ ಚೌದರಿ, ಪ್ರಿಯಾಂಕ, ಪವನ ಖಟಾವ್‌ಕರ್ ಸೇರಿದಂತೆ ಮುಂತಾದವರು ಪಾರಾಯಣ ಮಾಡಿದರು.

## ನವಿಲೆಯಲ್ಲಿ ಕೃಷಿ, ತೋಟಗಾರಿಕೆ ಮೇಳ

ದಾವಣಗೆರೆ, ಅ.16- ಶಿವಮೊಗ್ಗದ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟ ಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲ ಯದಿಂದ ಕೃಷಿ ಹಾಗೂ ಕೃಷಿ ಸಂಬಂಧಿತ ಅಭಿವೃದ್ಧಿ ಇಲಾಖೆಗಳ ಸಹಯೋಗದೊಂದಿಗೆ ನಾಡಿದ್ದು ದಿನಾಂಕ 18 ರಿಂದ 21 ರವರೆಗೆ ನವಿಲೆಯಲ್ಲಿನ ವಿವಿ ಆವರಣದಲ್ಲಿ ಕೃಷಿ ಮತ್ತು ತೋಟಗಾರಿಕೆ ಮೇಳ ಆಯೋಜಿಸಲಾಗಿದೆ. ಕೃಷಿ- ತೋಟಗಾರಿಕೆ ಮೇಳವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟನೆ ಮಾಡುವರು. ಈ ಮೇಳದಲ್ಲಿ ನೂತನ ಕೃಷಿ ಪದ್ಧತಿ, ವಿವಿಧ ತಳಿಗಳ ಪರಿಚಯ, ಕೃಷಿಯಲ್ಲಿ ಆಧುನಿಕತೆ ಸೇರಿದಂತೆ ವಸ್ತುಪ್ರದರ್ಶನ ಮತ್ತು ಮಾಹಿತಿ ನೀಡಲಾಗುವುದು.


**ವಾಲ್ಮೀಕಿ ಜಯಂತಿ ಶುಭಾಶಯ ಹಾಗೂ ಅಭಿನಂದನೆ**





ಬಾಳೆಹೊಲದ ರೇವಣಸಿದ್ದಪ್ಪ



ಜಿ. ಸುರೇಶ್

**ನಾಡಿನ ಸಮಸ್ತ ಜನತೆಗೆ ಮಹರ್ಷಿ ಶ್ರೀ ವಾಲ್ಮೀಕಿ ಜಯಂತಿಯ ಶುಭಾಶಯಗಳು.**
ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಕಾರ್ಮಿಕರ ವಿಭಾಗದ ಜಿಲ್ಲಾ ಕಾರ್ಯದರ್ಶಿಯಾಗಿ ಆಯ್ಕೆಯಾಗಿರುವ **ಶ್ರೀ ಬಾಳೆಹೊಲದ ರೇವಣಸಿದ್ದಪ್ಪ** ಹಾಗೂ ಜಿಲ್ಲಾ ಸಂಘಟನಾ ಕಾರ್ಯದರ್ಶಿಯಾಗಿ ಆಯ್ಕೆಯಾಗಿರುವ **ಶ್ರೀ ಜಿ.ಸುರೇಶ್** ಅವರುಗಳಿಗೆ ಹಾರ್ದಿಕ ಅಭಿನಂದನೆಗಳು.



**ಆಲೂರು ಪ್ರಕಾಶ್**
ಕಾಂಗ್ರೆಸ್ ಮುಖಂಡರು



**ಲೋಕೇಶ್ ನಾಯ್ಕ**
ರಾಜ್ಯ ಸಂಘಟನಾ ಕಾರ್ಯದರ್ಶಿ
ಕಾರ್ಮಿಕರ ವಿಭಾಗ, ಕಾಂಗ್ರೆಸ್ ಪಕ್ಷ



**ಎಸ್. ಚೌಡಪ್ಪ**
ಜಿಲ್ಲಾ ಉಪಾಧ್ಯಕ್ಷರು
ಕಾರ್ಮಿಕರ ವಿಭಾಗ, ಕಾಂಗ್ರೆಸ್ ಪಕ್ಷ



**ಆರ್. ವೆಂಕಟೇಶ್**
ತಾಲ್ಲೂಕು ಉಪಾಧ್ಯಕ್ಷರು
ಕಾರ್ಮಿಕರ ವಿಭಾಗ, ಕಾಂಗ್ರೆಸ್ ಪಕ್ಷ





# ಪಾಲಿಕೆಯಲ್ಲಿ ಸಾರ್ವಜನಿಕರ ಕೆಲಸ ನಿರ್ಲಕ್ಷಿಸಿದರೆ ಸೂಕ್ತ ಕ್ರಮ



## ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಎಚ್ಚರಿಕೆ

ದಾವಣಗೆರೆ. ಅ.16- ಮಹಾನಗರ ಪಾಲಿಕೆಯಲ್ಲಿ ಇ- ಸ್ವತ್ತು ಸೇರಿದಂತೆ ವಿವಿಧ ಕೆಲಸಗಳನ್ನು ನೆರವೇರಿಸಲು ಅಧಿಕಾರಿಗಳು ವಿಳಂಬ ಧೋರಣೆ ತೋರುತ್ತಿದ್ದಾರೆ. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರ ಬಳಿ ಸಾರ್ವಜನಿಕರು ದೂರು ಸಲ್ಲಿಸಿದರು.

ಮಹಾನಗರ ಪಾಲಿಕೆಯಲ್ಲಿ ನಿನ್ನೆ ನಡೆದ ನೂತನ ಮೇಯರ್ ಕೆ. ಚಮನ್ ಸಾಬ್ ಅವರ ಕಚೇರಿ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಂಡಿದ್ದ ಸಂದರ್ಭದಲ್ಲಿ ಸಂಸದರಾದ ಡಾ.ಪ್ರಭಾ ಮಲ್ಲಿಕಾರ್ಜುನ್ ಅವರು ತಮ್ಮನ್ನು ಭೇಟಿ ಮಾಡಿದ ಸಾರ್ವಜನಿಕರ ಸಮಸ್ಯೆಗಳನ್ನು ಆಲಿಸಿದರು. ತಕ್ಷಣವೇ ಸ್ಪಂದಿಸಿದ ಸಂಸದರು ಇ- ಸ್ವತ್ತು ಸೇರಿದಂತೆ ವಿವಿಧ ಕೆಲಸಗಳ ಬಗ್ಗೆ ಸಾರ್ವಜನಿಕರ ದೂರು ಬಂದ ಹಿನ್ನೆಲೆಯಲ್ಲಿ ಕ್ರಮಕ್ಕೆ ಸೂಚನೆ ನೀಡಿದರು.

ಇದೇ ವೇಳೆ ಬಹಳ ದಿನಗಳಿಂದ ಒಂದೇ ಕಡೆ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸ್ಥಳ ಬದಲಾಯಿಸಲು ಹಾಗೂ ಭ್ರಷ್ಟಾಚಾರದ ಬಗ್ಗೆ ದೂರು ಬಂದರೆ ಅಂಥವರ ವಿರುದ್ಧ ಶಿಸ್ತಿನ ಕ್ರಮ ಜರುಗಿಸಲು ಕಟ್ಟುನಿಟ್ಟಿನ ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ಮೇಯರ್ ಕೆ. ಚಮನ್ ಸಾಬ್, ಉಪಮೇಯರ್ ಸೋಗಿ ಶಾಂತಕುಮಾರ್, ಮುಖಂಡರಾದ ಡಿ. ಬಸವರಾಜ್, ವಿನಾಯಕ್ ಪೈಲ್ವಾನ್ ಹಾಗೂ ಪಾಲಿಕೆ ಸದಸ್ಯರು ಉಪಸ್ಥಿತರಿದ್ದರು.



# ನಗರದ ತುಳಜಾ ಭವಾನಿ ದೇವಸ್ಥಾನದಲ್ಲಿ ಇಂದು ಸತ್ಯನಾರಾಯಣ ಪೂಜೆ

ಕೆಟಿಜೆ ನಗರ 3ನೇ ಮುಖ್ಯ ರಸ್ತೆ, 11ನೇ ತಿರುವಿ ನಲ್ಲಿರುವ ಶ್ರೀ ತುಳಜಾ ಭವಾನಿ ದೇವಸ್ಥಾನದಲ್ಲಿ ಹುಣ್ಣಿಮೆ ಅಂಗವಾಗಿ ಇಂದು ಸಂಜೆ 6 ಗಂಟೆಗೆ ಶ್ರೀ ಸತ್ಯನಾರಾಯಣ ಪೂಜೆ ಏರ್ಪಡಿಸ ಲಾಗಿದೆ.

# ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿಗೆ ಲಕ್ಷ ರೂ. ಸೈಬರ್ ವಂಚನೆ

ಇಂದೋರ್, ಅ. 16 - ಮಧ್ಯಪ್ರದೇಶದ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿಗೆ ಸೈಬರ್ ವಂಚಕರು 1 ಲಕ್ಷ ರೂ.ಗಳ ವಂಚನೆ ಮಾಡಿದ ಘಟನೆ ನಡೆದಿದೆ. ಇಂದೋರ್ ನಿವಾಸಿಯಾದ ನಿವೃತ್ತ ನ್ಯಾಯಮೂರ್ತಿ ಆನ್‌ಲೈನ್ ಮೂಲಕ ಎರಡು ಪಾಕೆಟ್ ಸಿಹಿ ತಿನಿಸಿಗೆ ಹಣ ನೀಡಿದ್ದರು. ಆದರೆ, ಅವರಿಗೆ ಒಂದು ಪಾಕೆಟ್ ಸಿಹಿ ತಿನಿಸು ಮಾತ್ರ ಬಂದಿತ್ತು.

ಈ ಬಗ್ಗೆ ಅವರು ಆನ್‌ಲೈನ್ ಗ್ರಾಹಕರ ಸೇವಾ ಸಂಖ್ಯೆಗೆ ಗೂಗಲ್ ಮೂಲಕ ಹುಡುಕಿದ್ದರು. ಆಗ ಅವರು ಆಕಸ್ಮಿಕವಾಗಿ ವಂಚಕರು ರೂಪಿಸಿದ್ದ ನಕಲಿ ವೆಬ್ ತಾಣಕ್ಕೆ ತಲುಪಿದ್ದರು. ನಾವು ಈ ಕಂಪನಿಯ ಉದ್ಯೋಗಿಗಳು ಎಂದು ಹೇಳಿದ ವಂಚಕರು, ನಿವೃತ್ತ ನ್ಯಾಯಮೂರ್ತಿಗೆ ಲಿಂಕ್ ಒಂದನ್ನು ಕಳಿಸಿದ್ದರು. ಆ ಲಿಂಕ್ ಒತ್ತಿದಾಗ, ಅವರಿಗೆ ಗೊತ್ತಿಲ್ಲದೇ ಸ್ಕ್ರೀನ್ ಶೇರಿಂಗ್ ಆಪ್ ಒಂದು ಡೌನ್ ಲೋಡ್ ಆಗಿತ್ತು. ನಂತರ ವಂಚಕರು ಫೋನ್ ಆಪ್ ಮೂಲಕ ಒ.ಟಿ.ಪಿ. ಪಡೆದು, ಬ್ಯಾಂಕ್ ಖಾತೆಯಿಂದ 1 ಲಕ್ಷ ರೂ. ಹಣ ಪಡೆದಿದ್ದಾರೆ. ಈ ಬಗ್ಗೆ ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದ್ದಾರೆ.

# ಕಸಾಪ : ಜಗಳೂರಿನಲ್ಲಿ ಇಂದು ಸಭೆ



ಜಗಳೂರಿ ನಲ್ಲಿ ನಡೆಸಬೇಕೆಂದಿರುವ ಉದ್ದೇಶಿತ ಜಿಲ್ಲಾ 14 ನೇ ಕನ್ನಡ ಸಾಹಿತ್ಯ ಸಮ್ಮೇಳನದ ಕುರಿತಾಗಿ ಪೂರ್ವ ಸಿದ್ಧತಾ ಸಭೆಯನ್ನು ಇಂದು ಅಪರಾಹ್ನ 3 ಘಂಟೆಗೆ ಜಗಳೂರಿನ ತಾಲ್ಲೂಕು ಪಂಚಾಯತಿ ಸಭಾಂಗಣದಲ್ಲಿ ಕರೆಯಲಾಗಿದೆ. ಶಾಸಕ ಬಿ. ದೇವೇಂದ್ರಪ್ಪ ಅವರ ಉಪಸ್ಥಿತಿ ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ. ವಾಮದೇವಪ್ಪ ಅವರ ಅಧ್ಯಕ್ಷತೆಯಲ್ಲಿ ಈ ಸಭೆ ಏರ್ಪಾಡಾಗಿದೆ.

# ಅಖಿಲ ಭಾರತ ವೀರಶೈವ ಮಹಾಸಭಾದ ಕಾರ್ಯನಿರ್ವಾಹಕ ಸಮಿತಿ ಸಭೆ



ಬೆಂಗಳೂರು, ಅ.16- ಅಖಿಲ ಭಾರತ ವೀರಶೈವ ಮಹಾಸಭಾದ ಕರ್ನಾಟಕ ರಾಜ್ಯ ಘಟಕ ಕಾರ್ಯ ನಿರ್ವಾಹಕ ಸಮಿತಿ ಸಭೆಯು ಇಂದಿಲ್ಲಿ ನಡೆಯಿತು. ವೀರಶೈವ ಮಹಾಸಭಾ ಅಧ್ಯಕ್ಷ ಡಾ. ಶಾಮನೂರು ಶಿವಶಂಕರಪ್ಪ ಅಧ್ಯಕ್ಷತೆಯಲ್ಲಿ ಏರ್ಪಾಡಾಗಿದ್ದ ಈ ಸಭೆಯಲ್ಲಿ ವೀರಶೈವ ಮಹಾಸಭಾ ಕಾರ್ಯದರ್ಶಿ ಈಶ್ವರ್ ಖಂಡ್ರೆ, ಮಹಾಸಭಾದ ರಾಜ್ಯಾಧ್ಯಕ್ಷ ಶಂಕರ್ ಬಿದರಿ, ಉಪಾಧ್ಯಕ್ಷರೂ ಆಗಿರುವ ಹಿರಿಯ ಕೈಗಾರಿಕೋದ್ಯಮಿ ಡಾ. ಅಥಣಿ ಎಸ್. ವೀರಣ್ಣ ಹಾಗೂ ಸಮಿತಿ ಸದಸ್ಯರುಗಳು ಹಾಜರಿದ್ದರು.

# ಕ್ಷತ್ರಿಯ ಮರಾಠ ಸಮಾಜದ ವೆಬ್ ಸೈಟ್ ಉದ್ಘಾಟನೆ




ದಾವಣಗೆರೆ, ಅ.16- ಕ್ಷತ್ರಿಯ ಮರಾಠ ಸಮಾಜ ಚಾರಿಟೇಬಲ್ ಟ್ರಸ್ಟ್ ವತಿಯಿಂದ ವೆಬ್ ಸೈಟ್ ಉದ್ಘಾಟನೆ ಮತ್ತು ವೆಬ್‌ಸೈಟ್ ನಲ್ಲಿಯೇ ವಧೂ-ವರರ ನೋಂದಣಿ ಹಾಗೂ ಪಾಲಕರ ಸಮಾವೇಶ ಕಾರ್ಯಕ್ರಮವು ಇದೇ ದಿನಾಂಕ 20ರ ಭಾನುವಾರ ಬೆಳಿಗ್ಗೆ 9 ರಿಂದ ಸಂಜೆ 4ರವರೆಗೆ ಹುಬ್ಬಳ್ಳಿಯ ವಿದ್ಯಾನಗರದಲ್ಲಿರುವ ಮರಾಠ ಶ್ರೀ ಭಾರತಿ ಮಠ ಭವನದಲ್ಲಿ ನಡೆಯಲಿದೆ.

ಕಾರ್ಯಕ್ರಮಕ್ಕೆ ಸಂಬಂಧಪಟ್ಟಂತೆ ವಿವರಗಳಿಗಾಗಿ ಸ್ಥಳೀಯ ಕೃಷ್ಣರಾವ್ ಸಾವಂತ್ (9342514779) ಅವರನ್ನು ಸಂಪರ್ಕಿಸಬಹುದು.

### ಭದ್ರಾ ಜಲಾಶಯ

ನೀರಿನ ಮಟ್ಟ : 186' 0,
ಒಳ ಹರಿವು : 6762 ಕ್ಯೂಸೆಕ್ಸ್,
ಹೊರ ಹರಿವು : 6762 ಕ್ಯೂಸೆಕ್ಸ್
ಕಳೆದ ವರ್ಷ : 156.5 ಅಡಿ






# ಜಿಲ್ಲೆಯ ಹಿರಿಯ ಸಾಹಿತಿ ಎರ್ರಿಸ್ವಾಮಿ ಅವರಿಗೆ ಲೋಹಿಯಾ ಪ್ರಶಸ್ತಿ ಪ್ರದಾನ



ಜಗಳೂರು, ಅ.16- ಬೆಂಗಳೂರಿನ ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ ಕೊಡಮಾಡುವ ರಾಜ್ಯಮಟ್ಟದ ಲೋಹಿಯಾ ಪ್ರಶಸ್ತಿಯನ್ನು ಜಗಳೂರಿನ ಹಿರಿಯ ಸಾಹಿತಿ ಹಾಗೂ ಲೀಡ್ ಬ್ಯಾಂಕ್ ನಿವೃತ್ತ ವಿಭಾಗೀಯ ವ್ಯವಸ್ಥಾಪಕ ಎನ್. ಟಿ. ಎರ್ರಿಸ್ವಾಮಿ ಅವರಿಗೆ ಪ್ರದಾನ ಮಾಡಲಾಯಿತು. ಎರ್ರಿ ಸ್ವಾಮಿಯವರ ಸುದೀರ್ಘ ಬ್ಯಾಂಕಿಂಗ್ ಸೇವೆ ಹಾಗೂ ಸಾಹಿತ್ಯದ ಸಾಧನೆಗಾಗಿ ಈ ಪ್ರಶಸ್ತಿಯನ್ನು ನೀಡಲಾಗಿದೆ. ಪ್ರೊ. ಬಿ ಕೃಷ್ಣಪ್ಪ ಟ್ರಸ್ಟ್ ನ ವ್ಯವಸ್ಥಾಪಕ ಟ್ರಸ್ಟಿ ಶ್ರೀಮತಿ ಇಂದಿರಾ ಕೃಷ್ಣಪ್ಪ ಪ್ರಶಸ್ತಿ ಪ್ರದಾನ ಮಾಡಿದರು. ಸುಮಂಗಲಿ ಸೇವಾ ಆಶ್ರಮದ ಅಧ್ಯಕ್ಷರಾದ ಡಾ. ಎಸ್. ಜಿ. ಸುಶೀಲಮ್ಮ ಅಧ್ಯಕ್ಷತೆ ವಹಿಸಿದ್ದರು.

# ವಿವಿಧ ಕಚೇರಿಗಳಿಗೆ ಡಿಸಿ ಅನಿರೀಕ್ಷಿತ ಭೇಟಿ, ಮಧ್ಯವರ್ತಿಗಳಿಗೆ ಎಚ್ಚರಿಕೆ



ದಾವಣಗೆರೆ, ಅ. 16 - ಜಿಲ್ಲಾಧಿಕಾರಿಗಳು ಪ್ರಾದೇಶಿಕ ಸಾರಿಗೆ ಕಚೇರಿ ಮತ್ತು ಉಪನೋಂದಣಾಧಿಕಾರಿಗಳ ಕಚೇರಿಗೆ ಬುಧವಾರ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿ ಅಲ್ಲಿ ಕಂಡು ಬಂದ ಮಧ್ಯವರ್ತಿಗಳಿಗೆ ಖಡಕ್ ಎಚ್ಚರಿಕೆ ನೀಡಿದರು. ಪ್ರಾದೇಶಿಕ ಸಾರಿಗೆ ಕಚೇರಿ ಭೇಟಿ ನೀಡಿ ಕೌಂಟರ್‌ನಲ್ಲಿ ನಿಂತಿದ್ದ ಸಾರ್ವಜನಿಕರ ಎಫ್. ಸಿ, ನವೀಕರಣ, ಡ್ರೈವಿಂಗ್ ಲೈಸೆನ್ಸ್ ಹಾಗೂ ವಿವಿಧ ಪರವಾನಿಗೆ ಪಡೆದ ಕಡತಗಳನ್ನು ಪರಿಶೀಲಿಸಿದರು. ತದನಂತರ ಉಪನೋಂದಣಾಧಿಕಾರಿಗಳ ಕಚೇರಿಗೆ ಭೇಟಿ ನೀಡಿ ಅಲ್ಲಿನ ಸ್ಥಿತಿಗತಿ ಬಗ್ಗೆ ಪರಿಶೀಲಿಸಿದರು.






KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas